ದಕ್ಷಿಣ ಕನ್ನಡ ಪದ್ಮಶಾಲಿ ಸಮಾಜ ಸೇವಾ ಕೂಟ (ರಿ), ಬೆಂಗಳೂರು ಪ್ರಕಟಣೆ

SHETTIGARA VAANI

# ಶೆಟ್ಟಿಗಾರ ವಾಣಿ

ಬೆಂಗಳೂರು ನಿವಾಸಿ ಕರಾವಳಿ ಮೂಲದ ಶೆಟ್ಟಿಗಾರ ಸಮಾಜದ ಮುಖವಾಣಿ

ಸಂಪುಟ:1 | ಸೆಪ್ಟೆಂಬರ್ 2024 | ಸಂಚಿಕೆ:3 | ಪುಟಗಳು: 11

**ಸಂಪಾದಕ ಮಂಡಳಿ**

ಶ್ರೀ ನಾರಾಯಣ ಶೆಟ್ಟಿಗಾರ್
ಶ್ರೀ ಮಾಧವ ಶೆಟ್ಟಿಗಾರ್. ಯು
ಶ್ರೀ ಪ್ರಕಾಶಚಂದ್ರ ಆತ್ರಾಡಿ
ಶ್ರೀ ಪ್ರಭಾಕರ ಶೆಟ್ಟಿಗಾರ್. ಎಂ
ಶ್ರೀ ಮಾಧವ ಶೆಟ್ಟಿಗಾರ್ ಶೆಟ್ಟಿಗಾಡು
ಶ್ರೀ ಸುಂದರ ಎಸ್ ಶೆಟ್ಟಿಗಾರ್, ಎಕ್ಕಾರ್
ಶ್ರೀ ದೊಂಬಯ್ಯ ಶೆಟ್ಟಿಗಾರ್
ಶ್ರೀಮತಿ ಬಾನುಮತಿ ಡಿ. ಶೆಟ್ಟಿಗಾರ್
ಸಿ.ಎ. ವಿಶ್ರಾಂತ್ ಬಿ. ಎಲ್
ಶ್ರೀ ಯತೀಶ್ ಎಲ್. ಶೆಟ್ಟಿಗಾರ್
ಶ್ರೀಮತಿ ಉಷಾ ಚೇತನ್

**ವಿನ್ಯಾಸ ಮತ್ತು ತಂತ್ರಜ್ಞಾನ ನೆರವು**

ಶ್ರೀ ಯಶಸ್ವಿ ಜೆ
ಶ್ರೀ ರಾಮಕೃಷ್ಣ ಸಾಲಿಕೇರಿ

ವಿಳಾಸ

ಶೆಟ್ಟಿಗಾರವಾಣಿ, C/o ದಕ್ಷಿಣ ಕನ್ನಡ ಪದ್ಮಶಾಲಿ ಸಮಾಜ ಸೇವಾ ಕೂಟ (ರಿ),
ನಂ.8, ಶಾಂತವೇರಿ ಗೋಪಾಲಗೌಡ ನಗರ,
4ನೇ ಅಡ್ಡ ರಸ್ತೆ, ಮೂಡಲಪಾಳ್ಯ, ಬೆಂಗಳೂರು-560072

ಮೊಬೈಲ್: 9535443311
ಇಮೇಲ್: dkpadmashalibng@gmail.com
ವೆಬ್ ಸೈಟ್: www.dkpadmashalibng.in

ಸೂಚನೆ: ಇಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳು ಆಯಾ ಲೇಖಕರ ವೈಯಕ್ತಿಕ ಅಭಿಪ್ರಾಯಗಳು ಮಾತ್ರ; ಪತ್ರಿಕೆಯ ಅಥವಾ ಕೂಟದ ಅಭಿಪ್ರಾಯಗಳಲ್ಲ.

ಚಿಂತನ- ಮಂಥನ

## ಬದಲಾವಣೆ ಜಗದ ನಿಯಮ

ಇಂದಿನ ವಿದ್ಯಮಾನಗಳ ಬಗ್ಗೆ ಅವಲೋಕನ ಮಾಡಿದಾಗ ನಮಗೆ ಕಾಣಸಿಗುವುದು ಒಂದು ಬಗೆಯ ನವ್ಯತೆ. ಅದು ಸಾಮಾಜಿಕ ವಿಷಯವಾಗಿರಲಿ, ಚಲನ ಚಿತ್ರವಾಗಿರಲಿ, ದೈನಂದಿನ ಕಾರ್ಯ ನಿರ್ವಹಣೆಯಾಗಿರಲಿ, ಮನುಷ್ಯ ಮನುಷ್ಯರ ನಡುವಿನ ಬಾಂಧವ್ಯವಾಗಿರಲಿ, ಶಾಲೆ ಕಾಲೇಜುಗಳಲ್ಲಿ ಕಲಿಸುವ ವಿವಿಧ ವಿದ್ಯಾಭ್ಯಾಸ ಅಥವಾ ಇತರ ಚಟುವಟಿಕೆಗಳಾಗಿರಲಿ, ಒಂದು ವಿಷಯವನ್ನು ಅರ್ಥೈಸುವ ಪರಿಯಾಗಿರಲಿ, ಗುರು ಹಿರಿಯರೊಂದಿಗೆ ವರ್ತಿಸುವ ನಡತೆಯಾಗಿರಲಿ, ಸಾಮಾಜಿಕ ಮೌಲ್ಯಗಳಾಗಿರಲಿ, ಇವುಗಳೆಲ್ಲದರಲ್ಲೂ ಒಂದು ರೀತಿಯ ಪರಿವರ್ತನೆ, ನವ್ಯತೆ ಅಥವಾ ಬದಲಾವಣೆಯನ್ನು ಕಾಣಬಹುದಾಗಿದೆ. ಹೌದು, ಹಾಗಂತ, ತಾತ ನೆಟ್ಟ ಅರಳೀ ಮರಕ್ಕೇನೇ ಸುತ್ತು ಬರುತ್ತಿರುವುದರಿಂದ ಯಾವ ಪ್ರಯೋಜನವೂ ಇಲ್ಲವೆನ್ನುವುದನ್ನು ಇಂದಿನ ಪೀಳಿಗೆ ಚೆನ್ನಾಗಿ ಅರ್ಥ ಮಾಡಿಕೊಂಡಂತಿದೆ. ವಾಣಿಜ್ಯ ವ್ಯವಹಾರಗಳಲ್ಲೂ ಬದಲಾವಣೆಯನ್ನು ಗಮನಿಸುತ್ತಿದ್ದೇವೆ. ಇವೆಲ್ಲವೂ ಸರಿಯಾಗಿಲ್ಲ, ಮೊದಲು ಏನಿತ್ತೋ ಅದೇ ಚೆಂದ ಎಂದು ಗೋಣು ಮುರಿಯುವ ಗೀಳು ಹಿಂದಿನ ಪೀಳಿಗೆಯ ಕೆಲವರಲ್ಲಿ ಇದ್ದಂತಿದ್ದರೂ ತಪ್ಪೇನಿಲ್ಲ. ಆದರೆ ಒಂದು ವಿಷಯವನ್ನು ನಾವು ಖಂಡಿತವಾಗಿಯೂ ಗಮನಿಸಲೇ ಬೇಕು. ಅದುವೇ ನವ್ಯತೆ ಹಾಗೂ ಬದಲಾವಣೆ. ಇದು ಅವಶ್ಯವಾಗಿ ಬೇಕೇ ಬೇಕು. ಯಾಕೆಂದರೆ ಬದಲಾವಣೆ ಜಗದ ನಿಯಮ. ಉದಾಹರಣೆಗಾಗಿ ಹಿಂದೆ ಒಲೆ ಹಾಕಿ ಸೌದೆ ಉರಿಸಿ ಅಡಿಗೆ ಮಾಡಿದ್ದರೆ ಇಂದು ಗ್ಯಾಸ್ ಇಲ್ಲವೇ ವಿದ್ಯುತ್ ಉಪಯೋಗಿಸಿ ಒಲೆ ಉರಿಸುವುದು ಸರ್ವೇ ಸಾಮಾನ್ಯ. ಇಂದಿನ ಯುಗ ಹೊಸತನದ ಮೆರುಗಿನಿಂದ ಮೆರೆಯುತ್ತಿದೆ. **ಸರ್ವೇಜನ ಸುಖಿನೋ ಭವಂತು.**



ಮಾಧವ ಶೆಟ್ಟಿಗಾರ್, ಯು.
ವಿಜಯನಗರ, ಬೆಂಗಳೂರು



AI generated image: No photo credits required

# ಒಂದು ಸಂಚಿಯ ಕಥೆ

ನೇಸರನುದಯಿಸುವ ಮೊದಲು
ಬಲೆಯ ಪಿಡಿದು ಹೋಗುತಿರಲು
ಮೀನ ಹಿಡಿದು ಮಾರಲೆಂದು
ಕೆರೆಯ ಬಳಿಗೆ ತಾ

ಮುಂಜಾನೆ ಇನ್ನೂ ಆಗದಿರಲು
ಕತ್ತಲಲ್ಲಿ ಭರದಿ ಸಾಗುತಿರಲು
ಕಾಲಿಗೆಂತೋ ವಸ್ತುವೊಂದು
ಅವಗೆ ಎಡವಿತ್ತಾ

ಚೀಲವದನು ಎತ್ತಿಕೊಳಲು
ತುಂಬಿದ ಸಂಚಿಯಂತಿರಲು
ಸಣ್ಣ ಗಾಜಿನ ತುಂಡುಗಳೆಂದು
ಯೋಚಿಸಿದನಾತಾ

ಕೆರೆಘಟ್ಟದಿ ಕುಳಿತುಕೊಳಲು
ಸಮಯ ಮುಂದೆ ಸಾಗದಿರಲು
ಅಂಬರಮಣಿಯ ದಾರಿ ಕಾದು
ಚಿಂತೆಯಾಗಿತ್ತಾ

ಸಂಚಿಯಿಂದ ತುಂಡ ಎತ್ತಿಕೊಳಲು
ಕೆರೆಯ ನೀರಿಗೆ ಎಸೆಯುತಿರಲು
ಒಂದೊಂದೇ ಕಾಚುತುಂಡದು
ಖಾಲಿಯಾಗುತಿತ್ತಾ

ಅರುಣಕಿರಣವು ಭುವಿಯ ತಾಕಲು
ಇನ್ನು ಬಲೆಯ ಹಾಕುವೆನೆನಲು
ಕೊನೆಯ ಎರಡು ಕಾಚು ತುಂಡದು
ತೆಗೆಯಲಾತಾ

ರವಿಯ ಬೆಳಕಿಗೆ ತುಂಡು ಮಿನುಗಲು
ಬಿಸುಕಿಹುದು ವಜ್ರವೆಂದರಿವಾಗಲು
ದಿಸಕ್ಕೆಂದಿತು ಹೃದಯ ಅವನದು
ಎಲ್ಲ ಮುಳುಗಿತ್ತಾ

ಅಯ್ಯೊವಿಧಿಯೇ ಎನುತ ಸೀವರಿಸಲು
ಎನ್ನ ಹಣೆಬರಹವೇ ಮುಳುಗಿತೆನಲು
ಅರಿಯಲಾದೆನಾ ದೊರಕಿದೊಂದು
ಲಕ್ಷ್ಮಿಕಟಾಕ್ಷವೆನುತ

ದೂರದಿ ಬರುತಿಹ ಮುನಿಯ ಕಾಣಲು
ತನ್ನ ದುಃಖಕೆ ಪರಿಹಾರವೀಯಲು
ವ್ಯಥೆಯ ಕಥೆಯ ಬಿನ್ನಹಗೈದು
ಶರಣಾದನಾತ

ಕಳೆದ ಕಳವಳದಿ ಕೊರಗುತಿರಲು
ಇರುವುದ ಅಲಕ್ಷಿಸುವೆಯೆನಲು
ಉಳಿದ ವಜ್ರವ ಬಳಸು ಎಂದು
ಹರಸಿದ ಮುನಿ ತಾ

ಶೇಷವೇ ವಿಶೇಷವೆನುತಲಿ
ಉಳಿದುದೆ ಪ್ರಸಾದವೆನುತಲಿ
ವಜ್ರವ ತಾ ಮಾರಿಕೊಂಡು
ಬದುಕಿದನಾತ



**ಡಾ. ಶಿವಪ್ರಸಾದ್ ಕಾರ್ಕಳ,**
**ಉಡುಪಿ.**

**ಶಬ್ದಾರ್ಥಗಳು:**
ಕಾಚು = ಗಾಜು;  ಘಟ್ಟ = ನೀರಿಗೆ ಇಳಿಯಲು ಕಟ್ಟಿರುವ ಮೆಟ್ಟಲು;
ಅಂಬರಮಣಿ = ಸೂರ್ಯ; ಸೀವರಿಸು = ಬೇಸರಿಸು, ಫೀಳಿಡು;
ಧೇನಿಸು = ಯೋಚಿಸು



AI generated image: No photo credits required



# ಸಂಪಾದಕ ವಾಣಿ

## ನಾರಾಯಣ ಶೆಟ್ಟಿಗಾರ್

**ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಂ**
**ಪ್ರಸನ್ನವದನಂ ಧ್ಯಾಯೇತ್ ಸರ್ವವಿಘ್ನೋಪಶಾಂತಯೇ**

ವೈಕುಂಠದಲ್ಲಿ ಶ್ರೀವಿಷ್ಣುವಿನ ಬಳಿ ಒಂದು ಶಂಖ ಇತ್ತು. ಇದ್ದಕ್ಕಿದ್ದ ಹಾಗೆ ಒಂದು ದಿನ ಆ ಶಂಖ ಕಾಣೆಯಾಯಿತು. ಎಲ್ಲೆಲ್ಲಿ ಹುಡುಕಿದರೂ ಅದು ಪತ್ತೆಯಾಗಲಿಲ್ಲ. ಆಗ ದೂರದಲ್ಲಿ ಶಂಖದ ಧ್ವನಿ ಕೇಳಿಸಿತು. ಹೌದು, ಶಂಖನಾದ ಕೈಲಾಸದ ಕಡೆಯಿಂದಲೇ ಬರುತ್ತಿತ್ತು. ವಿಚಾರಿಸಿದಾಗ ಶಂಖವನ್ನು ಗಣೇಶ ತೆಗೆದುಕೊಂಡಿರುವುದು ತಿಳಿದು ಬಂತು. ವಿಷ್ಣು ಕೈಲಾಸಕ್ಕೆ ಹೋಗಿ ಶಂಖವನ್ನು ಕೊಡುವಂತೆ ಗಣೇಶನನ್ನು ಕೇಳಿದ. ಗಣೇಶ ಒಪ್ಪಲಿಲ್ಲ. ಸಾಕ್ಷಾತ್ ಪರಮೇಶ್ವರನೇ ಶಂಖವನ್ನು ಕೊಡುವಂತೆ ಹೇಳಿದರೂ ಗಣೇಶ ಕೊಡಲಿಲ್ಲ. ವಿಷ್ಣು ಯೋಚನೆ ಮಾಡಿದ. ವಿಘ್ನವಿನಾಯಕನೊಂದಿಗೆ ಸಂಘರ್ಷ ಸರಿಯಲ್ಲ ಎಂದುಕೊಂಡ. ಗಣೇಶನ ಪೂಜೆ ಮಾಡುವುದೊಂದೇ ಶಂಖವನ್ನು ಪಡೆಯಲು ಉಳಿದಿರುವ ಮಾರ್ಗ ಎಂದು ಅರಿತುಕೊಂಡ. ವಿಷ್ಣು ಗಣೇಶನ ಪೂಜೆ ಮಾಡಿದಾಗ ಸಂಪ್ರೀತನಾದ ವಿಘ್ನೇಶ್ವರ ಶಂಖವನ್ನು ಹಿಂದಕ್ಕೆ ಕೊಟ್ಟ.

ಒಂದು ಸಲ ಶಿವನು ತ್ರಿಪುರರೆಂಬ ರಾಕ್ಷಸರೊಂದಿಗೆ ಯುದ್ಧ ಮಾಡಲು ತನ್ನ ಸೇನೆಯೊಂದಿಗೆ ಹೊರಟ. ಆದರೆ ಹೊರಡುವ ಮೊದಲು ಗಣೇಶನ ಪೂಜೆ ಮಾಡುವುದನ್ನು ಮರೆತು ಬಿಟ್ಟ. ಇದರಿಂದ ಅವನು ಅನೇಕ ವಿಘ್ನಗಳನ್ನು ಎದುರಿಸಬೇಕಾಯಿತು. ಮುಂದೆ ಸಾಗುವುದೇ ದುಸ್ತರ ಎನ್ನುವ ಪರಿಸ್ಥಿತಿ ಎದುರಾದಾಗ ಶಿವನಿಗೆ ತನ್ನ ತಪ್ಪಿನ ಅರಿವಾಯಿತು. ಕೂಡಲೇ ಗಣಪತಿಯ ಪೂಜೆಯನ್ನು ಶ್ರದ್ಧೆಯಿಂದ ಮಾಡಿದ ಕಾರಣ ಎಲ್ಲಾ ತೊಂದರೆಗಳು ದೂರವಾಗಿ ಶಿವನಿಗೆ ಅಸುರರನ್ನು ಗೆಲ್ಲುವುದು ಸಾಧ್ಯವಾಯಿತು.

ಯಾವುದೇ ಕೆಲಸ ಪ್ರಾರಂಭಿಸುವ ಮೊದಲು ವಿಘ್ನವಿನಾಶಕ ಗಣಪತಿಗೆ ಪ್ರಥಮ ಪೂಜೆ ಸಲ್ಲಿಸಬೇಕು. ಹಾಗೆ ಮಾಡುವುದರಿಂದ ಉದ್ದೇಶಿತ ಕಾರ್ಯ ನಿರ್ವಿಘ್ನವಾಗಿ ನೆರವೇರುತ್ತದೆ. ಆದರೆ ಎಲ್ಲಾ ದೇವದೇವತೆಗಳಿಗೂ ಮೊದಲು ಗಣೇಶನಿಗೇ ಏಕೆ ಪೂಜೆ ಸಲ್ಲಬೇಕು? ಅದಕ್ಕೂ ಕಾರಣ ಇದೆ. ಗೌರಿ ಗಣೇಶನನ್ನು ಸೃಷ್ಟಿ ಮಾಡಿ, ಬಾಗಿಲ ಬಳಿ ಅವನನ್ನು ನಿಲ್ಲಿಸಿ ಸ್ನಾನಕ್ಕೆ ಹೋದದ್ದು, ಆಗ ಅಲ್ಲಿಗೆ ಬಂದ ಶಿವನ ಪ್ರವೇಶಕ್ಕೆ ಅಡ್ಡಿ ಮಾಡಿದ ಗಣೇಶನ ತಲೆಯನ್ನು ಪರಮೇಶ್ವರ ಕತ್ತರಿಸಿದ್ದು ಎಲ್ಲರಿಗೂ ತಿಳಿದ ವಿಷಯ. ಅದರಿಂದ ದುಃಖಿತಳಾಗಿ ಕ್ರೋಧಾವಿಷ್ಟಗೊಂಡು ಇಡೀ ವಿಶ್ವವನ್ನೇ ನಾಶಮಾಡಲು ಹೊರಟ ಶಿವೆಯನ್ನು ಸಮಾಧಾನ ಪಡಿಸುವ ಸಲುವಾಗಿ ಆನೆಯ ತಲೆಯನ್ನು ತಂದು ಜೋಡಿಸಿ, ಶಿವನು ಗಣೇಶನಿಗೆ ಮರುಜೀವ ನೀಡಿದ. ಮಾತ್ರವಲ್ಲ, ಯಾವಾಗಲೂ ಗಣೇಶನಿಗೆ ಪ್ರಥಮ ಪೂಜೆ ಸಲ್ಲಿಸಬೇಕೆಂಬ ನಿಯಮವನ್ನೂ ಘೋಷಣೆ ಮಾಡಿದ.

ಗಣೇಶನ ಮಹಿಮೆ ಮತ್ತು ಅವನು ನಡೆಸಿದ ಕೀಟಲೆಗಳನ್ನು ಕುರಿತ ಕಥೆಗಳು ಅನೇಕ. ನೀವೂ ಆ ಕಥೆಗಳನ್ನು ಕೇಳಿರುತ್ತೀರಿ. ಸಂದರ್ಭ ಬಂದಾಗ ಅಂತಹ ಕಥೆಗಳನ್ನು ಉದ್ಧರಿಸಲೂ ಬಹುದು.

ಭಾದ್ರಪದ ಮಾಸದ ಶುಕ್ಲಪಕ್ಷದ ಚೌತಿಯ ದಿನವನ್ನು ಗಣೇಶ ಚತುರ್ಥಿ ಎಂದು ನಾಡಿನಾದ್ಯಂತ ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಮನೆಮನೆಗಳಲ್ಲಿ ಮಾತ್ರವಲ್ಲ, ಬೀದಿಬೀದಿಗಳಲ್ಲೂ ಗಣಪತಿಯ ಮೂರ್ತಿಗಳನ್ನು ಪ್ರತಿಷ್ಟಾಪನೆ ಮಾಡಿ, ವೈಭವದಿಂದ ಹಲವು ದಿವಸಗಳ ವರೆಗೂ ಪೂಜಿಸಿ, ವಿಘ್ನೇಶ್ವರನ ಕೃಪೆಯನ್ನು ಸಂಪಾದಿಸಲಾಗುತ್ತದೆ.

**ಸಂಕಷ್ಟಹರ ಗಣೇಶ ಸರ್ವರಿಗೂ ಮಂಗಳಕಾರಕನಾಗಲಿ.**

# ನಿನಗೆ ನೀನೆ ದಾರಿದೀಪ

ಸಾಮಾನ್ಯವಾಗಿ, ನಾವು ಮನುಷ್ಯನನ್ನು ಸಂಘ ಜೀವಿ ಎನ್ನುತ್ತೇವೆ. ಅಂದರೆ, ಮನುಷ್ಯ ತನ್ನ ಸಮಾಜದೊಂದಿಗೆ ಕೂಡಿ ಬಾಳುವುದು ಒಂದು ಸಹಜ ಮತ್ತು ಅನಿವಾರ್ಯ ಪ್ರಕ್ರಿಯೆ. ನಮ್ಮ ಜೀವನ ಪಯಣವನ್ನೇ ಗಮನಿಸಿದರೆ, ನಮಗೆ ಹುಟ್ಟಿನಿಂದ ಸಾಯುವವರೆಗೆ ಹೊಸ ಹೊಸ ಸಂಬಂಧಗಳು ಎದುರಾಗುತ್ತಲೇ ಇರುತ್ತವೆ. ಆದರೆ, ಎಲ್ಲಾ ಸಂಬಂಧಗಳು ಆತ್ಮೀಯವಾಗುವುದಿಲ್ಲ. ಕೆಲವೊಂದು ಮಾತ್ರ ಸಹನೀಯ ಮತ್ತು ಸಾಮಿಪ್ಯವೆನಿಸುವ ಭಾವನೆ ತರಿಸುತ್ತವೆ. ಹುಟ್ಟಿಸಿದ ಅಪ್ಪ ಅಮ್ಮ, ಒಡಹುಟ್ಟಿದ ಸಹೋದರ ಸಹೋದರಿಯರು, ಮುಂದೆ ಜೊತೆಯಾಗುವ ಗಂಡ ಹೆಂಡತಿ, ಮಕ್ಕಳು, ಮೊಮ್ಮಕ್ಕಳು, ಹೀಗೆ, ಜೀವನದ ವಿವಿಧ ಕಾಲಘಟ್ಟದಲ್ಲಿ ನಮ್ಮ ಬದುಕಿನಲ್ಲಿ ಸೇರಿಕೊಳ್ಳುವ ಈ ಆಪ್ತ ಸಂಬಂಧಗಳೊಂದಿಗೆ, ಬಾಹ್ಯ ಜಗತ್ತಿನಲ್ಲಿ ಕೂಡ ನಿರಂತರವಾಗಿ ಮುಖಾಮುಖಿಯಾಗುವ ಅಸಂಖ್ಯಾತ ಸಂಬಂಧಗಳು ನಮ್ಮ ಬದುಕನ್ನು ಸ್ಮರಣೀಯವಾಗಿಸುತ್ತವೆ. ದಾರ್ಶನಿಕರೊಬ್ಬರು ಹೇಳಿದಂತೆ, ಕೆಲವು ಸಂಬಂಧಗಳು ಯಾವುದೇ ಒಂದು ಕಾರಣಕ್ಕೆ ಮಾತ್ರ ಸೇರಿಕೊಂಡರೆ, ಇನ್ನು ಕೆಲವು ಸಂಬಂಧಗಳು ಜೀವನದ ಯಾವುದೋ ಒಂದು ಕಾಲಘಟ್ಟದಲ್ಲಿ ಜೊತೆಯಾಗುತ್ತವೆ. ಆದರೆ, ಕೆಲವೇ ಕೆಲವು ಸಂಬಂಧಗಳು ಮಾತ್ರ ಜೀವನಪರ್ಯಂತ ನಮ್ಮ ಜೊತೆಯಾಗಿರುತ್ತವೆ.

ಇಲ್ಲಿನ ಮುಖ್ಯ ಪ್ರಶ್ನೆ, ಈ ಚಂಚಲ ಬಾಹ್ಯ ಸಂಬಂಧಗಳನ್ನು ನಾವೆಷ್ಟು ನೆಚ್ಚಿಕೊಳ್ಳಬಹುದು? ಜನರು ಬದಲಾಗುತ್ತಿರುತ್ತಾರೆ, ನಾವು ಕೂಡ ಬದಲಾಗುತ್ತೇವೆ. ಹಾಗಾಗಿ, ಈ ಎಲ್ಲಾ ಬಾಹ್ಯ ಸಂಬಂಧಗಳ ಜೊತೆಜೊತೆಗೆ, ನಮ್ಮ ಅಂತರಂಗದ ಜೊತೆಗೆ ನಮಗಿರುವ ಸಂಬಂಧ ಕೂಡ ಅಷ್ಟೇ ಮುಖ್ಯ. ಆದರೆ, ನಾವು ಅದನ್ನು ಬಹುತೇಕ ಮರೆತೇ ಜೀವಿಸುತ್ತೇವೆ. ಈ ಆತ್ಮಶಕ್ತಿ, ನಮ್ಮನ್ನು ಮಾನಸಿಕವಾಗಿ ಪರಿಪಕ್ವವಾಗಿಸಲು ಬಹಳ ಮುಖ್ಯ.

ಹಾಗಿದ್ದಲ್ಲಿ, ಈ ಆತ್ಮ ಸಾಂಗತ್ಯದ ವೈಶಿಷ್ಟತೆಯೇನು? ಸೂಕ್ಷ್ಮವಾಗಿ ಗಮನಿಸಿದರೆ, ನಮಗಿರುವ ಎಲ್ಲಾ ಬಾಹ್ಯ ಸಂಬಂಧಗಳು ಒಂದಲ್ಲ ಒಂದು ಕಾಲಘಟ್ಟದಲ್ಲಿ ಮುಗಿದು ಹೋಗುತ್ತದೆ, ಅವು ಎಷ್ಟೇ ಆತ್ಮೀಯವಾಗಿದ್ದರೂ ಕೂಡ. ಕೆಲವೊಮ್ಮೆ, ಈ ಸಂಬಂಧಗಳು ಅಂತ್ಯಗೊಂಡಾಗ ನಾವು ತೀವ್ರ ಮಾನಸಿಕ ಆಘಾತಕ್ಕೊಳಗಾಗುತ್ತೇವೆ. ಕೆಲವರಂತೂ ಅದರಿಂದ ಚೇತರಿಸಿ ಕೊಳ್ಳಲಾಗದೆ ತಮ್ಮ ಜೀವನವನ್ನೇ ಅಂತ್ಯಗೊಳಿಸುವುದನ್ನು ನೋಡುತ್ತಿರುತ್ತೇವೆ. ಇದಲ್ಲದೆ, ಈ ಬಾಹ್ಯ ಸಂಬಂಧಗಳು ನಮಗೆ ನಂಬಿಕೆ ದ್ರೋಹ ಮಾಡಿದಾಗ, ನಮಗೆ ಮನುಷ್ಯತ್ವದ ಮೇಲೆಯೇ ನಂಬಿಕೆ ಕಳೆದುಹೋಗುವುದಿದೆ. ಇಂತಹ ಅನುಭವಗಳು ನಮ್ಮನ್ನು ಇನ್ನಷ್ಟು ಜಾಗ್ರತರನ್ನಾಗಿಸುತ್ತದೆ.

ಈ ಹಿನ್ನೆಲೆಯಲ್ಲಿ, ಮನುಷ್ಯನ ಈ ಪ್ರಾಪಂಚಿಕ ಜೀವನದ ಏಳು ಬೀಳುಗಳ ಮಧ್ಯೆ ಅವನಿಗೆ ಮುಂದುವರಿಯುವ ಶಕ್ತಿ ಮತ್ತು ಭರವಸೆ ನೀಡುವುದು ಯಾವುದು? ಅದು ಅವನ ಆಂತರಿಕ ಶಕ್ತಿ ಮಾತ್ರ. ಆಶ್ಚರ್ಯವೆಂದರೆ, ನಮಗೆ ದೊರಕುವ ಶಿಕ್ಷಣ ಮತ್ತು ನಮ್ಮ ಸುತ್ತಲಿನ ಜಗತ್ತು ಕಟ್ಟಿ ಕೊಡುವ ಜೀವನೋಪದೇಶಗಳು, ನಮ್ಮಲ್ಲಿ ಈ ಆಂತರಿಕ ಶಕ್ತಿ ಉದ್ದೀಪನಗೊಳಿಸಬೇಕಾದ ಅಗತ್ಯವನ್ನು ಹೇಳಿಕೊಡುವುದು ಬಹಳ ಕಡಿಮೆಯೆನ್ನಬಹುದು.

ಗೌತಮ ಬುದ್ಧ ಹೇಳಿದಂತೆ, 'ನಿನಗೆ ನೀನೆ ದಾರಿದೀಪ'. ಸುತ್ತಲಿನ ಪ್ರಪಂಚ ಮತ್ತು ಅದರಲ್ಲಿನ ಜನರು, ಕಾಲಕ್ಕೆ ತಕ್ಕಂತೆ, ತಂತಮ್ಮ ಹಿತಾಸಕ್ತಿ, ಆದ್ಯತೆಗಳಿಗೆ ಅನುಗುಣವಾಗಿ ಬದಲಾಗುತ್ತಿರುತ್ತಾರೆ. ಹಾಗಾಗಿ, ಅವರಿಂದ ನಾವು ಒಂದೇ ರೀತಿಯ ಆತ್ಮೀಯತೆಯನ್ನು ನಿರೀಕ್ಷಿಸುವುದು ತಪ್ಪು. ಈ ನಿಟ್ಟಿನಲ್ಲಿ, ನಮಗೆ ಧೈರ್ಯ ನೀಡುವ ಶಕ್ತಿ, ಕೇವಲ ನಮ್ಮಲ್ಲಿ ಮಾತ್ರ ಇರುತ್ತದೆ. ನಾವು ಹುಟ್ಟಿದ ಕ್ಷಣದಿಂದ ಸಾಯುವರೆಗೂ ನಮ್ಮೊಂದಿಗೆ ಜೊತೆಯಾಗಿ ಇರುವುದು, ನಮ್ಮ ದೇಹ ಮತ್ತು ಮನಸ್ಸು ಮಾತ್ರ. ಅದು ಸ್ವಸ್ಥವಾಗಿದ್ದರೆ, ಬಾಹ್ಯ ಲೋಕದ ಬದಲಾವಣೆಗಳು ನಮ್ಮನ್ನು ಅಷ್ಟಾಗಿ ತಟ್ಟುವುದಿಲ್ಲ. ಮಾತ್ರವಲ್ಲ, ನಮಗೆ ಮುನ್ನಡೆಯುವ ಶಕ್ತಿ ನೀಡುವುದರೊಂದಿಗೆ, ಮಾನಸಿಕ ದೃಢತೆ ನೀಡುತ್ತದೆ.

ವಿಶೇಷವಾಗಿ ಪ್ರಸಕ್ತದ ವೇಗ ಮತ್ತು ವ್ಯಾವಹಾರಿಕ ಜಗತ್ತಿನಲ್ಲಿ ಜನರು ತಂತಮ್ಮ ಜೀವನಾಸಕ್ತಿಯಲ್ಲಿ ಮುಳುಗಿರುವಾಗ, ನಮ್ಮ ಕಷ್ಟ ಸುಖ ಕೇಳುವ ವ್ಯವಧಾನ ಅಥವಾ ಪ್ರೀತಿಯನ್ನು ಸುತ್ತಲಿನ ಜನರಿಂದ ನಿರೀಕ್ಷಿಸುವುದರಿಂದ, ನಾವೇ ಭ್ರಮನಿರಸನರಾಗುವ ಸಾಧ್ಯತೆ ಹೆಚ್ಚೆನ್ನಬಹುದು. ಹಾಗೆಯೇ, ಎಲ್ಲಾ ಸಂದರ್ಭಗಳಲ್ಲಿ ಅನ್ಯರು ನಮ್ಮನ್ನು ಕೈಹಿಡಿದು ಮುನ್ನೆಡೆಸಲಾರರು. ಆದ್ದರಿಂದ ಸುದೃಢ ದೇಹ ಮತ್ತು ಮನಸ್ಸನ್ನು ಹೊಂದುವುದು ನಮ್ಮ ಜೀವನಕ್ಕೆ ಆರೋಗ್ಯಕರ. ಇದನ್ನು ಜಗತ್ತಿನ ಎಲ್ಲ ತತ್ವಶಾಸ್ತ್ರಜ್ಞರು ಮತ್ತು ದಾರ್ಶನಿಕರು ಪದೇ ಪದೇ ಹೇಳುತ್ತಲೇ ಬಂದಿದ್ದಾರೆ.



**ಡಾ. ಜ್ಯೋತಿ**
**ತುಮಕೂರು ವಿಶ್ವವಿದ್ಯಾನಿಲಯ**
**ತುಮಕೂರು**

# ಸ್ವಾತಂತ್ರ್ಯ ದಿನಾಚರಣೆ

ಸತ್ಯಧರ್ಮ ನ್ಯಾಯ-ನೀತಿಯ ದ್ಯೋತಕವಿದು ನಮ್ಮ ಈ ಧ್ವಜವಿದು.
ಅಹಿಂಸೆ-ತ್ಯಾಗ-ಬಲಿದಾನದ ಚಿರ ಉಲ್ಲೇಖವಿದು.
ನಿರಂತರ ಸಮೃದ್ಧಿಯೇ ತಾರಕ ಮಂತ್ರವೆಂಬ
ದಿವ್ಯ ಉದ್ಘೋಷವಿದು ನಮ್ಮ ಈ ಧ್ವಜವು.

"ದೇಶ ನಮ್ಮದು-ನಮ್ಮದು ನಾಡು ಎನ್ನದ ಮಾನವನೆದೆ ಸುಡುಗಾಡು"
"ಸ್ವರ್ಗವೇ ಮೇಲು ಎಂದರೆ ತಾಯಿ, ತಾಯ್ನಾಡು ಸ್ವರ್ಗಕ್ಕಿಂತಲೂ ಮೇಲು"
ಎಂದರು ಪ್ರಾಜ್ಞರು.

ಸಂಸ್ಕಾರ ಚರಿತರಾದ ನಾವು ನಮ್ಮ-ನಮ್ಮ ಕಾಯಕದಲ್ಲಿ ತದೇಕಚಿತ್ತರಾಗಿ
ತಲ್ಲೀನರಾಗೋಣ
ಭೂತ-ವರ್ತಮಾನ-ಭವಿಷ್ಯತ್‌ಗೂ ಧಾರೆಯೆರೆದುಕೊಟ್ಟ
ಈ ದಿವ್ಯ ಸ್ವಾತಂತ್ರ್ಯದ ಸಾಫಲ್ಯತೆಗೆ ಭಾಜನರಾಗೋಣ.

ಸ್ವಾತಂತ್ರ್ಯಕ್ಕೆ ಹೋರಾಡಿ ಹುತಾತ್ಮರಾದ ಧೀರೋದ್ದಾತ ದಿವ್ಯಚೇತನರೆಲ್ಲರಿಗೂ
ನಮ್ಮ ನಮನವನ್ನು ಸಲ್ಲಿಸುತ್ತಾ ಈ ದಿನವನ್ನು ಕಳೆಯೋಣ.
ಜೈಹಿಂದ್ ಜೈಹಿಂದ್ ಜೈಹಿಂದ್



**ಎಕ್ಕಾರ್ ಡಿ. ಪಿ. ಶೆಟ್ಟಿಗಾರ್**
**ಶೇಷಾದ್ರಿಪುರಂ, ಬೆಂಗಳೂರು**

# ಬೆಂದು ಹೋದಳು ಕುಂತಿ

ಜೀವನದುದ್ದಕ್ಕೂ ನೋವನ್ನೇ ಉಂಡು, ನೋವಿನಲ್ಲೇ ಕೈತೊಳೆದುಕೊಂಡು, ಸಿಗದ ನೆಮ್ಮದಿಯನ್ನು ಹುಡುಕುತ್ತಾ, ಜೀವನವನ್ನು ಸವೆಸಿದ ಒಂದು ಜೀವ ಕುಂತಿ.

ಹಸ್ತಿನಾಪುರದ ಪಾಂಡು ಮಹಾರಾಜನ ಪತ್ನಿ ಈ ಕುಂತಿ. ಅದಕ್ಕೂ ಮೊದಲು ಯಾದವ ದೊರೆ ಶೂರಸೇನನ ಮಗಳು. ಶ್ರೀಕೃಷ್ಣನ ತಂದೆ ವಸುದೇವನ ಸಹೋದರಿ. ಪ್ರಥೆಯೆಂಬ ನಾಮಧೇಯ ಪಡೆದವಳು.

ಕುಂತೀಭೋಜ ಶೂರಸೇನನ ಸೋದರತ್ತೆಯ ಮಗ. ಇವನಿಗೆ ಸಂತಾನವಿರಲಿಲ್ಲ. ಆದ್ದರಿಂದ ಪ್ರಥೆಯನ್ನು ತನ್ನ ಮಗಳೆಂದು ಸ್ವೀಕರಿಸಿ ಸಾಕಿ ಸಲಹಿದ. ಕುಂತೀಭೋಜನ ಮಗಳು ಕುಂತಿಯೂ ಆದಳು. ಕುಂತಿ ಬಹಳ ಸುಂದರಿ ಮತ್ತು ಬುದ್ಧಿವಂತೆಯಾಗಿದ್ದಳು. ಹುಟ್ಟಿನಿಂದಾಗಲೀ ಬಳಿಕವಾಗಲೀ ಅವಳಿಗೆ ಯಾವ ಕೊರತೆಯೂ ಇರಲಿಲ್ಲ.

ಒಮ್ಮೆ ದೂರ್ವಾಸ ಮುನಿಗಳು ಕುಂತೀಭೋಜನ ಅರಮನೆಗೆ ಬಂದರು. ಒಂದು ವರ್ಷಕಾಲ ಅರಮನೆಯಲ್ಲಿ ಉಳಿದುಕೊಳ್ಳುವ ಇಂಗಿತವನ್ನು ಪ್ರಕಟಿಸಿದರು. ಇದರಿಂದ ಕುಂತೀಭೋಜನಿಗೆ ಸಂತೋಷಕ್ಕಿಂತ ಹೆಚ್ಚಾಗಿ ಆತಂಕ ಪ್ರಾರಂಭವಾಯಿತು. ದೂರ್ವಾಸರ ಕೋಪ ತಿಳಿಯದವರಿಲ್ಲ. ಸಣ್ಣಪುಟ್ಟ ದೋಷಗಳಿಗೂ ಕೋಪಗೊಂಡು ಕೆಂಡಾಮಂಡಲರಾಗಿ ಶಾಪ ನೀಡುವುದು ಅವರ ಸ್ವಭಾವ. ಅಂತಹ ಮುನಿಗಳನ್ನು ನಿಭಾಯಿಸುವವರಾರು? ಆ ಸಮಯದಲ್ಲಿ ಅವನಿಗೆ ನೆನಪಾದವಳು ಈ ಕುಂತಿ. ಹಿರಿಯರ ಸೇವೆಯನ್ನು ಉತ್ಸಾಹದಿಂದ ಮಾಡುವುದು ಕುಂತಿಯ ವಿಶೇಷ ಗುಣ ಮತ್ತು ಸ್ವಭಾವ. ಇಂತಹ ಶಾಂತಮೂರ್ತಿಯೇ ದೂರ್ವಾಸರ ಸೇವೆಗೆ ಸೂಕ್ತ ಎಂಬ ತೀರ್ಮಾನಕ್ಕೆ ಕುಂತೀಭೋಜ ಬಂದ. ಒಂದು ವೇಳೆ ಸಣ್ಣ ಪುಟ್ಟ ತಪ್ಪುಗಳೇನಾದರೂ ಸಂಭವಿಸಿದರೂ ಚಿಕ್ಕ ಹುಡುಗಿಯೆಂಬ ಕಾರಣಕ್ಕೆ ಮುನಿಗಳು ಕ್ಷಮಿಸಬಹುದು ಎಂಬುದು ಅವನ ದೂರಾಲೋಚನೆ. ಅಂತೆಯೇ ಕುಂತಿಯನ್ನು ದೂರ್ವಾಸರ ಸೇವೆಗೆ ನೇಮಿಸಿದ.

ವಿಚಿತ್ರ ಸ್ವಭಾವದ ದೂರ್ವಾಸರನ್ನು ತೃಪ್ತಿಗೊಳಿಸುವುದು ಅತ್ಯಂತ ಪ್ರಯಾಸದ ಕೆಲಸ. ಅವರು ಯಾವಾಗ ಬರುತ್ತಾರೆ, ಯಾವಾಗ ಹೋಗುತ್ತಾರೆ, ಯಾರಿಗೂ ತಿಳಿಯುತ್ತಿರಲಿಲ್ಲ. ಅಕಾಲದಲ್ಲಿ ಬಂದು ಅತ್ಯಂತ ಕಷ್ಟಸಾಧ್ಯವಾದ ತಿನಿಸುಗಳನ್ನು ಬಯಸುತ್ತಿದ್ದರು. ಅಂತಹ ಸಮಯದಲ್ಲೂ ಕುಂತಿ ತಾಳ್ಮೆ ಕಳೆದುಕೊಳ್ಳದೆ ಅವರಿಗೆ ಬೇಕಾದುದನ್ನು ಶೀಘ್ರವಾಗಿ ಸಿದ್ಧಪಡಿಸಿ ತಂದುಕೊಡುತ್ತಿದ್ದಳು.

ಹೀಗೆ ಒಂದು ವರ್ಷವಿಡೀ ತಾಳ್ಮೆ ಕಳೆದುಕೊಳ್ಳದೆ, ಹಸನ್ಮುಖಳಾಗಿ ಸ್ವಲ್ಪವೂ ನ್ಯೂನತೆಯಿಲ್ಲದೆ ತನ್ನ ಸೇವೆ ಮಾಡಿದ ಕುಂತಿಯ ಕರ್ತವ್ಯನಿಷ್ಠೆಗೆ ಮೆಚ್ಚಿದ ದೂರ್ವಾಸರು, “ಮಗಳೇ, ನಿನ್ನ ಕಾರ್ಯತತ್ಪರತೆಗೆ ಮೆಚ್ಚಿದ್ದೇನೆ. ನಿನಗೆ ಬೇಕಾದ ವರವನ್ನು ಕೇಳು” ಎನ್ನುತ್ತಾರೆ. ಆದರೆ ಕುಂತಿ, “ನನ್ನ ಕರ್ತವ್ಯವನ್ನು ಮಾತ್ರ ನಾನು ಪರಿಪಾಲಿಸಿದ್ದೇನೆ. ನನಗೆ ಯಾವ ಆಸೆಯೂ ಇಲ್ಲ. ನನ್ನ ಸೇವೆಯಲ್ಲಿ ನನಗೇ ತಿಳಿಯದೆ ಕೊರತೆಗಳೇನಾದರೂ ಆಗಿದ್ದಲ್ಲಿ ನನ್ನನ್ನೂ ನನ್ನ ತಂದೆಯನ್ನೂ ಕ್ಷಮಿಸಿಬಿಡಿ. ಅಷ್ಟೇ ಸಾಕು” ಎನ್ನುತ್ತಾಳೆ. ಕುಂತಿಯ ಮುಗ್ಧ ಭಾಷೆ ದೂರ್ವಾಸ ಮಹರ್ಷಿಗಳನ್ನು ಇನ್ನಷ್ಟು ಪ್ರಸನ್ನಗೊಳಿಸಿತು. ಪ್ರಸನ್ನಚಿತ್ತರಾದ ಮುನಿಗಳು ಅವಳಿಗೆ ಸ್ವಯಂ ಪ್ರೇರಿತರಾಗಿ ಒಂದು ಮಂತ್ರೋಪದೇಶ ಮಾಡಿ, “ಮಗೂ, ಇದನ್ನು ಉಚ್ಚರಿಸಿ ಯಾವ ದೇವ ದೇವತೆಯನ್ನಾದರೂ ಆವಾಹನೆ ಮಾಡಿಕೊಳ್ಳಬಹುದು. ಆ ದೇವತೆ ಬಂದು ನಿನಗೆ ಪುತ್ರಸಂತಾನ ಕರುಣಿಸುವನು”



AI generated image: No photo credits required

ಎಂದು ಹೇಳಿ ಅಲ್ಲಿಂದ ಹೊರಟುಹೋಗುತ್ತಾರೆ.

ಅದುವರೆಗೆ ಕುಂತಿ ಕಾಯ್ದುಕೊಂಡಿದ್ದ ಅಗಾಧ ತಾಳ್ಮೆ, ಜಾಣ್ಮೆ, ಕಾರ್ಯ ತತ್ಪರತೆ, ವಯಸ್ಸಿಗೆ ಮೀರಿದ ಬುದ್ಧಿಮತ್ತೆ, ಅಪ್ರತಿಮ ಸಮಾಧಾನಚಿತ್ತ, ಕ್ಷಣಕಾಲ ಅವಳಿಂದ ದೂರ ಚಲಿಸಿದಂತೆ ಭಾಸವಾಗುತ್ತದೆ. ಅದರಿಂದ ತನ್ನ ಬಾಳಿನ ಅತ್ಯಂತ ದೊಡ್ಡ ದುರಂತವನ್ನು ತಾನೇ ತಂದುಕೊಳ್ಳುತ್ತಾಳೆ. ಅವಳ ವಿಚಲಿತಗೊಂಡ ಮನಸ್ಸು, ಮಹರ್ಷಿಗಳ ಮಂತ್ರೋಪದೇಶದ ಮಹತ್ತ್ವವನ್ನೇ ಪರೀಕ್ಷೆಗೊಳಪಡಿಸುವ ದುಸ್ಸಾಹಸಕ್ಕೆ ಮುಂದಾಗುವಂತೆ ಪ್ರೇರೇಪಣೆ ನೀಡಿದುದು ವಿಧಿಯ ಒಂದು ವಿಪರ್ಯಾಸ. ವಯಸ್ಸಿಗೂ ಮೀರಿದ ಪ್ರೌಢತೆ ಮೆರೆದಿದ್ದ ಕುಂತಿ ಅಂದು ಉದಯಸೂರ್ಯನನ್ನು ಕಂಡು ಆ ಮಂತ್ರದ ಪರೀಕ್ಷೆ ಮಾಡುವ ಉದ್ದೇಶದಿಂದ ಅವನ ಸ್ಮರಣೆ ಮಾಡುತ್ತಾಳೆ. ಮಹರ್ಷಿಗಳ ಮಂತ್ರೋಪದೇಶಕ್ಕೆ ಕಟ್ಟುಬಿದ್ದ ಸೂರ್ಯದೇವ ಕ್ಷಣಮಾತ್ರದಲ್ಲಿ ಪ್ರತ್ಯಕ್ಷನಾಗಿ, ಮುದ್ದಾದ ಮಗುವೊಂದನ್ನು ಕರುಣಿಸುತ್ತಾನೆ. ಕವಚಕುಂಡಲಗಳನ್ನು ಹೊಂದಿಯೇ ಜನಿಸಿದ ಕಂದನನ್ನು ಕಂಡ ಕುಂತಿ ದಿಗ್ಭ್ರಾಂತಳಾಗಿ, ಲೋಕಾಪವಾದದ ಭಯದಿಂದ ಗಂಗಾನದಿಯಲ್ಲಿ ತೇಲಿಬಿಡುತ್ತಾಳೆ.

ಕುಂತಿಯು ತಾರುಣ್ಯಕ್ಕೆ ಕಾಲಿಡುತ್ತಿದ್ದಂತೆ ಕುಂತೀಭೋಜನು ಸ್ವಯಂವರದ ಮೂಲಕ ಅವಳ ವಿವಾಹ ನಡೆಸುವ ನಿಶ್ಚಯ ಮಾಡುತ್ತಾನೆ. ಸ್ವಯಂವರದ ದಿನ ಕುಂತಿ ವರಮಾಲಿಕೆಯನ್ನು ಹಿಡಿದು, ನೆರೆದ ಎಲ್ಲಾ ರಾಜಕುಮಾರರನ್ನು ನೋಡುವಾಗ ಅವಳ ಕಣ್ಣಿಗೆ ಹಸ್ತಿನಾಪುರದ ಪಾಂಡುರಾಜ ಕಾಣಿಸುತ್ತಾನೆ. ಅವಳು ಅವನನ್ನೇ ತನ್ನ ಪತಿಯನ್ನಾಗಿ ಪಡೆಯುವ ಹಂಬಲದಿಂದ ಅವನ ಕೊರಳಿಗೆ ವರಮಾಲೆಯನ್ನು ಹಾಕುತ್ತಾಳೆ. ಕುಂತಿ ಪಾಂಡುವಿನ ಪತ್ನಿಯಾಗಿ ಹಸ್ತಿನಾವತಿ ಸೇರುತ್ತಾಳೆ.

ಪಾಂಡುವಿನ ಪಟ್ಟದ ರಾಣಿ ಕುಂತಿಯ ಪಾಲಿಗೆ ಮೊದಲಿನಿಂದಲೂ ಸಿಕ್ಕಿದ್ದು ಬರಿಯ ನೋವುಗಳೇ. ಪಾಂಡುವಿನ ಎರಡನೇ ಹೆಂಡತಿ ಮಾದ್ರಿ ಅವಳನ್ನು ಪದೇಪದೇ ಕೆಣಕುತ್ತಿದ್ದಳಂತೆ. ಮಾದ್ರಿಯ ಜಿಂಕೆಯ ಆಸೆಗೆ ಬಲಿಯಾಗಿ ಪಾಂಡು ಶಾಪಗ್ರಸ್ಥನಾಗಿದ್ದ. ಆದರೂ ಕುಂತಿ ಸವತಿ ಮಾತ್ಸರ್ಯ ತೋರದೆ ಮುಂದೆ ತನಗೆ

ದೂರ್ವಾಸರಿಂದ ಅನುಗ್ರಹಿತವಾದ ಮಂತ್ರೋಪದೇಶದ ಬಲದಿಂದ ಮಾದ್ರಿಯ ಮಡಿಲೂ ನಕುಲ ಸಹದೇವರಿಂದ ತುಂಬುವಂತೆ ಮಾಡುತ್ತಾಳೆ. ಕೊನೆಗೆ ತನ್ನ ಗಂಡ ಪಾಂಡುರಾಜನನ್ನೂ ಕಳೆದುಕೊಂಡು, ಪಂಚಪಾಂಡವರನ್ನು ತಾನೇ ಸಂರಕ್ಷಣೆ ಮಾಡುವ ಜವಾಬ್ದಾರಿ ಹೊರುತ್ತಾಳೆ.

ಪಾಂಡವರು ಅರಸೊತ್ತಿಗೆಯ ಅರಮನೆಯಲ್ಲಿ ಬೆಳೆಯುವುದನ್ನು ಸಹಿಸದ ದುರ್ಯೋಧನ, ಅವರನ್ನು ಅರಗಿನ ಅರಮನೆಯಲ್ಲಿ ಕರಗಿಸುವ ಹುನ್ನಾರ ಮಾಡುತ್ತಾನೆ. ಕೌರವನ ಕುಟಿಲೋಪಾಯಗಳನ್ನು ವಿದುರನಿಂದ ತಿಳಿದ ಧರ್ಮರಾಯ ಜಾಗ್ರತನಾಗುತ್ತಾನೆ. ಅರಗಿನ ಮನೆಯಲ್ಲಿ ಸುಟ್ಟು ಹೋದ ಭಿಕ್ಷುಕಿ ಮತ್ತವಳ ಐವರು ಮಕ್ಕಳನ್ನು ನೋಡಿ ಕೌರವರು ಸಂತಸಪಡುತ್ತಾರೆ. 'ಬೆಂದು ಹೋದಳು ಕುಂತಿ ಮತ್ತು ಪಾಂಡವರು' ಎಂದುಕೊಂಡು ಸಂಭ್ರಮಿಸುತ್ತಾರೆ. ಆದರೆ ಭಗವದನುಗ್ರಹದಿಂದ ಕುಂತಿ ಮತ್ತು ಪಾಂಡವರಿಗೆ ಲಾಕ್ಷಾಗ್ರಹ ದಹನ ಕಂಟಕದ ಸಂದರ್ಭದಲ್ಲೂ ಪ್ರಾಣರಕ್ಷಣೆಯಾಯಿತು. ಆದರೆ ಅವರ ಪಾಲಿಗೆ ದೊರಕಿದ್ದು ಮಾತ್ರ ಕಾಂತಾರವಾಸ.

ಮುಂದೆ ಕೌರವರು ಪಾಂಡವರಿಗೆ ಕೊಟ್ಟ ಕಿರುಕುಳಗಳು, ಪಾಂಡವರು ಅನುಭವಿಸಬೇಕಾಗಿ ಬಂದ ಕಷ್ಟ ಕೋಟಲೆಗಳು, ದ್ಯೂತ, ವನವಾಸ, ಅಜ್ಞಾತವಾಸದ ವಿವರಗಳು ಎಲ್ಲರಿಗೂ ತಿಳಿದುದೇ. ಕೊನೆಗೂ ಕುರುಕ್ಷೇತ್ರದಲ್ಲಿ ಮಹಾಭಾರತ ಸಂಗ್ರಾಮ ನಡೆದೇಹೋಯಿತು.

ಹದಿನೆಂಟು ದಿನಗಳ ಮಹಾಭಾರತ ಯುದ್ಧದಲ್ಲಿ ಪಾಂಡವರಿಗೆ ನ್ಯಾಯಯುತವಾಗಿ ಜಯ ಲಭಿಸಿತು. ಧರ್ಮರಾಯ ಪಟ್ಟವನ್ನೇರಿದ. ಪ್ರಜೆಗಳು ಸುಭಿಕ್ಷವಾಗಿ ಜೀವನ ನಡೆಸುತ್ತಿದ್ದರು. ಆದರೆ ಆ ಮೂವರು ಮಾತ್ರ ಎಂದಿನ ತಮ್ಮ ನೋವುಗಳಿಂದ ಹೊರಬರಲೇ ಇಲ್ಲ. ನೂರು ಜನ ಮಕ್ಕಳನ್ನು ಕಳೆದುಕೊಂಡ ಧೃತರಾಷ್ಟ್ರ, ಗಾಂಧಾರಿ ದಂಪತಿಗಳು ಮತ್ತು ಹಿರಿಯ ಪುತ್ರವಿಯೋಗ ಹಾಗೂ ಭೀಷ್ಮ ಪಿತಾಮಹರನ್ನು ಕಳೆದುಕೊಂಡ ನೋವು ಅನುಭವಿಸುತ್ತಿದ್ದ ಕುಂತಿ, ಕೊನೆಗೂ ತಮ್ಮ ನೋವನ್ನು ಮರೆಯಲು ಸಾಧ್ಯವಾಗಲೇ ಇಲ್ಲ. ಕುಟುಂಬ ಕಲಹ ಕಾರಣದಿಂದ ಹತರಾದ ಬಂಧುಗಳ ನೆನಪು ಅವರನ್ನು ಕಾಡುತ್ತಲೇ ಇತ್ತು. ಕುರುಕ್ಷೇತ್ರ ಯುದ್ಧ ಮುಗಿದು ಹದಿನೈದು ವರ್ಷಗಳ ಮೇಲೆ ವಿದುರನ ಸಲಹೆ ಪಡೆದ ಧೃತರಾಷ್ಟ್ರ ದಂಪತಿಗಳು ವಾನಪ್ರಸ್ಥ ಸ್ವೀಕಾರ ಮಾಡುವ ನಿರ್ಧಾರ ಘೋಷಣೆ ಮಾಡುತ್ತಾರೆ. ಪಾಂಡವರು ಪರಿಪರಿಯಾಗಿ ಬೇಡಿಕೊಂಡು ಅವರ ನಿರ್ಧಾರ ಬದಲಿಸಲು ಶಕ್ತಿಮೀರಿ ಪ್ರಯತ್ನ ಮಾಡಿದರೂ ಅದು ಫಲಕಾರಿಯಾಗುವುದಿಲ್ಲ. ಇದಕ್ಕೂ ಮಿಗಿಲಾಗಿ ಪಾಂಡವರಿಗೆ ಆದ ಆಘಾತ ಧೃತರಾಷ್ಟ್ರ, ಗಾಂಧಾರಿಯರೊಂದಿಗೆ ತಾನೂ ವಾನಪ್ರಸ್ಥಕ್ಕೆ ತೆರಳುವ ಕುಂತಿಯ ನಿರ್ಧಾರ. ಜೊತೆಯಲ್ಲಿ ಸಂಜಯನೂ ಹೊರಡುತ್ತಾನೆ.

ಅರಣ್ಯವಾಸ ಪ್ರಾರಂಭವಾದ ಮೇಲೆ ಅವರೆಲ್ಲರೂ ಗಂಗಾನದಿ ತೀರದಲ್ಲಿ ಬೀಡು ಬಿಡುತ್ತಾರೆ. ಅವರು ಆಶ್ರಮವಾಸಿಗಳಾಗುತ್ತಾರೆ. ಒಂದು ದಿನ ಧೃತರಾಷ್ಟ್ರ ಗಂಗಾಸ್ನಾನ ಮಾಡುತ್ತಿರುವಾಗ ಕಾಡುಗಿಚ್ಚಿನಿಂದ ಅವರಿದ್ದ ಗುಡಿಸಲಿಗೂ ಬೆಂಕಿ ಬೀಳುತ್ತದೆ. ಹುಟ್ಟುಕುರುಡನಾದ ಧೃತರಾಷ್ಟ್ರನಿಗೆ ತೊಂದರೆಯಾಗಬಾರದೆಂಬ ಉದ್ದೇಶದಿಂದ ಕುಂತಿ, ಗಾಂಧಾರಿ, ಸಂಜಯರು ಅವನ ಬಳಿಗೆ ಓಡೋಡಿ ಬರುತ್ತಾರೆ. ನೀರಿನಲ್ಲಿದ್ದ ಧೃತರಾಷ್ಟ್ರನಿಗೆ ಸಂಜಯ ಕೂಗಿ ಹೇಳುತ್ತಾನೆ: "ಕಾಡಿಗೆ ಬೆಂಕಿ ಬಿದ್ದಿದೆ. ಇಲ್ಲಿದ್ದರೆ ಅಪಾಯ. ಬೇರೆ ಕಡೆಗೆ ಹೋಗಬೇಕು. ಬೇಗ ಬನ್ನಿ." ಆದರೆ ಆಗಲೇ ಧೃತರಾಷ್ಟ್ರ ಮುಕ್ತಿಯ ಆಲೋಚನೆ ಮಾಡುತ್ತಿದ್ದ. "ಹೇಗಿದ್ದರೂ ಗಂಗಾಸ್ನಾನ ಆಗಿದೆ. ಈಗ ಅಗ್ನಿಸ್ಪರ್ಶ ಮಾಡಿದರೆ ಎಲ್ಲಾ ಪಾಪಗಳು ನಿರ್ಮೂಲವಾಗುತ್ತವೆ" ಎಂಬ ನಿರ್ಧಾರಕ್ಕೆ ಬಂದ ಆತ ತಾನೆಲ್ಲಿಗೂ ಬರುವುದಿಲ್ಲ ಎಂದು ದೃಢ ಮನಸ್ಸಿನಿಂದ ಹೇಳುತ್ತಾನೆ. ಗಾಂಧಾರಿ ಕುಂತಿಯರೂ ಅದೇ ನಿರ್ಧಾರಕ್ಕೆ ಬರುತ್ತಾರೆ. ಮೂವರೂ ಅಗ್ನಿದೇವನಿಗೆ ಆಹುತಿಯಾಗುತ್ತಾರೆ. ಇದನ್ನು ಕಂಡ ಸಂಜಯ ದುಃಖದಿಂದ ಹಿಮಾಲಯದ ದಾರಿ ಹಿಡಿಯುತ್ತಾನೆ.

ಕೊನೆಗೂ ನಿಜವಾದ ಅರ್ಥದಲ್ಲಿಯೇ ಬೆಂದು ಹೋದಳು ಕುಂತಿ.



ನಾರಾಯಣ ಶೆಟ್ಟಿಗಾರ್
ವಿಶ್ವಪ್ರಿಯನಗರ, ಬೆಂಗಳೂರು

# ವಾಚಕರವಾಣಿ

ಆತ್ಮೀಯರೇ,

ಆಗಸ್ಟ್ ತಿಂಗಳ ಶೆಟ್ಟಿಗಾರ ವಾಣಿ ಪತ್ರಿಕೆ ತಲುಪಿತು. ಸಂಘದ ಕಾರ್ಯಕ್ರಮಗಳ ಮಾಹಿತಿ ಸ್ಫೂರ್ತಿದಾಯಕವಾಗಿತ್ತು. ಸಂಘಟನೆಗಳು ಸಮಾಜಮುಖಿಯಾಗಿ ಹೀಗೆ ಕೆಲಸ ಮಾಡಬಹುದೆಂಬುದನ್ನು ನೀವು ತೋರಿಸಿಕೊಡುತ್ತಿದ್ದೀರಿ. ಇದು ಇತರ ಸಂಘಟನೆಗಳಿಗೂ ಮಾದರಿಯಾಗಲಿ.

**ಡಾ. ಶಿವಪ್ರಸಾದ್ ಕಾರ್ಕಳ**
**ಉಡುಪಿ**

ಈ ತಿಂಗಳ ಶೆಟ್ಟಿಗಾರವಾಣಿ ಪತ್ರಿಕೆ ಚಂದವಾಗಿ ಬಂದಿದೆ. ವಿನ್ಯಾಸವೂ ಬಹಳ ಸೊಗಸಾಗಿದೆ... 👌 👌 💐 💐
ನನ್ನ ಕಥೆಗೆ ಹುಲಿಯ ಮೆರಗು ಕೊಟ್ಟಿದ್ದೀರಿ. ಬಹಳ ಚಂದವಾಯ್ತು. ಕುಷಿಯಾಯ್ತು..

**ರಮೇಶ್ ಶೆಟ್ಟಿಗಾರ್, ಮಂಜೇಶ್ವರ**

# ಮೂರಂಕ ಪ್ರಹಸನ

ಶುಭ್ರವಸನಧಾರಿ ವಿಷ್ಣು ಭಟ್ ಮಾಸ್ಟ್ರು ತನ್ನ ಕೈಯಲ್ಲಿ ಭೌತಶಾಸ್ತ್ರದ ಮಧ್ಯಾವಧಿ ಪರೀಕ್ಷೆಯ ಉತ್ತರಪತ್ರಿಕೆಯ ಕಟ್ಟನ್ನು ಕಂಕುಳದಲ್ಲಿಟ್ಟುಕೊಂಡು ನಮ್ಮ ಕ್ಲಾಸಿಗೆ ಆಗಮಿಸಿದರು. ನಾವೆಲ್ಲ ನಿಜಭಕ್ತಿಯಿಂದ ಎದ್ದು ನಿಂತೆವು. ನಮ್ಮ ಶಾಲೆಯಲ್ಲಿ ಎಲ್ಲರೂ ಅತ್ಯಂತ ಶೃದ್ಧಾಭಕ್ತಿಯಿಂದ ಪಾಠ ಆಲಿಸುತ್ತಿದ್ದ ಒಂದು ತರಗತಿಯೆಂದರೆ ಅದು ಭೌತಶಾಸ್ತ್ರ! ಅದನ್ನವರು ಭೋದಿಸುವ ರೀತಿ ಅನನ್ಯವಾಗಿತ್ತು. ಜೊತೆಗೆ ಅವರು ಮಿತಭಾಷಿಯೂ ಹೌದು, ಹಿತಭಾಷಿಯೂ ಹೌದು. ಹಾಗಾಗಿ ಅವರು ಸರ್ವಾದರಣೀಯರಾಗಿದ್ದರು.

ಮಾಸ್ಟ್ರು ಆ ಕಟ್ಟುಗಳನ್ನು ಮೇಜಿನ ಮೇಲಿಟ್ಟರು. ಅದರಲ್ಲಿ 54 ವಿದ್ಯಾರ್ಥಿಗಳ ಉತ್ತರಪತ್ರಿಕೆಯಿತ್ತು. ಅದನ್ನವರು ಅಚ್ಚುಕಟ್ಟಾಗಿ ಅಂಕ ಗಳಿಕೆಯ ಆಧಾರದ ಮೇಲೆ ಅವರೋಹಣ ಕ್ರಮದಲ್ಲಿ ಜೋಡಿಸಿದ್ದರು. ಅಂಕಗಳು 50ರಲ್ಲಿ. ಹಲವರಿಗೆ ಮಾತ್ರ ತಮ್ಮ ಅಂಕ ತಿಳಿಯಲು ತವಕವಿತ್ತು. ಅದರಲ್ಲೂ ಕ್ಲಾಸಿನಲ್ಲಿ ಕಲಿಯುವುದರಲ್ಲಿ ಸದಾ ಮುಂದಿದ್ದ ವಿಪ್ರಕುಲಜರಿಗೆ! ಕಟ್ಟಿನ ಮೊದಲಷ್ಟೂ ಪತ್ರಿಕೆಗಳು ಅವರದ್ದೇ ಎಂದು ನಾವು ಊಹಿಸಿದ್ದೆವು. ಮಾಸ್ಟ್ರು ಉತ್ತರಪತ್ರಿಕೆಯನ್ನು ಕೈಯಲ್ಲಿ ತೆಗೆದುಕೊಂಡು ಟೇಬಲಿಗೆ ಒರಗಿ ನಿಂತರು. ಎಲ್ಲರೆಡೆಗೆ ಒಮ್ಮೆ ಗಂಭೀರವಾಗಿ ನೋಡಿದರು. ತಾನು ಕಳೆದ ಎರಡು ವಾರಗಳಿಂದ ನಿದ್ದೆಗೆಟ್ಟು ಶ್ರದ್ಧೆಯಿಂದ ತಿದ್ದಿದ ಉತ್ತರಪತ್ರಿಕೆಗಳ ಕಡೆಗೊಂದು ಸಂತೃಪ್ತಭಾವವನ್ನು ಬೀರಿದರು. ಸ್ವರವನ್ನು ಸರಿಪಡಿಸಿಕೊಂಡು ಹೆಸರು ಕರೆದರು.

"ಸತ್ಯನಾರಾಯಣ ... 49.5"

ಕ್ಲಾಸಿನಲ್ಲಿ ಜೋರಾದ ಕರತಾಡನ. ಈಸಲ ಹತ್ತನೇ ಕ್ಲಾಸಿನಲ್ಲಿ ಕೇರಳ ರಾಜ್ಯಕ್ಕೇ ರ್‍ಯಾಂಕ್ ಪಡೆಯುವ ಅರ್ಹತೆ ಅವನಿಗಿದೆ, ಎಂದು ಎಲ್ಲರೂ ಅವನ ಮೇಲೆ ಭರವಸೆ ಇಟ್ಟಿದ್ದರು. ಹಾಗಾಗಿ ಅವನು ಹೆಸರು ಮೊದಲು ಕರೆದಾಗ ನಮಗ್ಯಾರಿಗೂ ಆಶ್ಚರ್ಯವಾಗಲಿಲ್ಲ. ಆದರೆ ಅವನಿಗೆ ಆ ಅರ್ಧ ಮಾರ್ಕು ಎಲ್ಲಿಗೆ ಹೋಯಿತು ಎಂಬ ಚಿಂತೆ. ತಾನೆಸಗಿದ ಮಹಾಪರಾಧವನ್ನು ಕಂಡುಹಿಡಿಯಲು ಅಂಕಪತ್ರಿಕೆಯನ್ನು ಅಲ್ಲೇ ಜಾಲಾಡಿಸಿದ. 12ನೇ ಪ್ರಶ್ನೆಗೆ ಅವನಿಗೆ ಮೂರರ ಬದಲು ಎರಡೂವರೆ ಮಾರ್ಕು ಬಂದಿತ್ತು. ಮಾಸ್ಟ್ರು ಅದನ್ನು ಲೆಕ್ಕಿಸದೆ ಮುಂದಿನ ಹೆಸರು ಕರೆದರು

"ಸೂರ್ಯನಾರಾಯಣ... 46"

ಸೂರ್ಯನಾರಾಯಣ ನಮ್ಮ ಕನ್ನಡ ಮಾಸ್ಟ್ರ ಮಗ. ಕಲಿಯುವುದರಲ್ಲಿ ಮುಂದೆ. ಸತ್ಯನಿಗಿಂತ ಹಿಂದೆ. ಅವನದ್ದು ಯಾವಾಗಲೂ ನಗುಮೊಗ. ಪಾಲಿಗೆ ಬಂದಿದ್ದು ಪಂಚಾಮೃತ ಎಂದು ಹಲ್ಲುಗಿಂಜುತ್ತಾ ಬಂದು ಮುಂದಿನ ಬೆಂಚಿನಲ್ಲಿ ಕುಳಿತ.

"ಜಲಜ... 44.5"

"ಸರಸ್ವತಿ...44"

ಇವರಿಬ್ಬರನ್ನು ಸತ್ಯ ಮತ್ತೆ ಸೂರ್ಯರನ್ನು ಬಿಟ್ಟರೆ ಇನ್ನ್ಯಾರೂ ಹಿಡಿಯುವುದಕ್ಕೆ



AI generated image: No photo credits required

ಆಗುವುದಿಲ್ಲ, ಕಲಿಯುವುದರಲ್ಲಿ. ವಿಪ್ರಕನ್ಯೆಯರು, ಹಾಗಾಗಿ ಅವರ ಸುದ್ದಿಯಲ್ಲಿ ನಾವಂತೂ ಮೊದಲೇ ಇಲ್ಲ! ಆದರೆ ನನ್ನ ಹಿಂದಿನ ಬೆಂಚಿನಲ್ಲಿ ಕುಳಿತ ಆರಡಿ ಉದ್ದದ ಅರವಿಂದ ಬಹಳ ಚಡಪಡಿಸುತ್ತಿದ್ದ. ಅವನೂ ಮಾಸ್ಟ್ರ ಮಗ. ಅವನೂ ಕಲಿಯುವುದರಲ್ಲಿ ಮುಂದೆ ಇದ್ದ, ಯಾವಾಗಲೂ ಐದರ ಒಳಗೆ. ಹಾಗಾಗಿ ತನ್ನ ಹೆಸರು ಯಾವಾಗ ಬರುವುದೋ? ಎಂದು ತವಕಿಸುತ್ತಿದ್ದ. ಅವನನ್ನು ಬಿಟ್ಟರೆ ಶ್ರೀಕೃಷ್ಣ, ರಾಮಚಂದ್ರ, ಪ್ರಸಾದ, ಸುಜಾತ, ಇವರೆಲ್ಲ. ಇವರಲ್ಲಿಯೂ ಪ್ರಸಾದ ಶೆಟ್ರು! ಬಾಕಿಯೆಲ್ಲ ಮೇಲ್ಪಂಕ್ತಿಯವರೇ!

ವಿಷ್ಣುಮಾಸ್ಟ್ರು ಮುಂದಿನ ಪತ್ರಿಕೆಯನ್ನು ತನ್ನ ಕೈಯಲ್ಲಿ ಹಿಡಿದು ಒಮ್ಮೆ ಎಲ್ಲರ ಮುಖಾವಲೋಕನ ನೋಡಿದರು. ಆ ಪತ್ರಿಕೆಯಲ್ಲಿ ಏನೋ ವಿಶೇಷವಿದೆ. ಮಡಚಿದ ಪತ್ರಿಕೆ! ಐದನೇ ಹೆಸರು! ಅದರ ಹಿಂದಿನ ಪುಟ ಖಾಲಿಯಿದ್ದ ಕಾರಣ ಅಕ್ಷರ ಸಹ ಗೊತ್ತಾಗುತ್ತಿರಲಿಲ್ಲ. ಅರವಿಂದ ಅದು ತನ್ನದೇ ಎಂದು ಎದ್ದು ಮುಂದೆ ಹೋಗಿಯೂ ಆಯ್ತು.

“ರ....ಮೇ... ಶ... 43.5” ಎಂದು ಹೆಸರು ಕರೆದಾಗ ನನ್ನೆದೆ ಒಮ್ಮೆ ದಸಕ್ಕೆಂದಿತು. ತರಗತಿಯಲ್ಲಿ ಮೊದಲ ಹತ್ತರ ಒಳಗೆ ಅಲ್ಲೊಮ್ಮೆ ಇಲ್ಲೊಮ್ಮೆ ನನ್ನ ಹೆಸರು ಇಣುಕುತ್ತಿದ್ದರೂ ಐದನೇ ಸ್ಥಾನಕ್ಕೆ? ಇಲ್ಲ, ಅದು ನಾನಲ್ಲವೆಂದುಕೊಂಡೆ, ಯಾಕಂದ್ರೆ ನಮ್ಮ ತರಗತಿಯಲ್ಲಿ ರಮೇಶತ್ರಯರಿದ್ದೆವು. ಹಾಗಾಗಿ ನಾನು ಕೂತೇ ಇದ್ದೆ. ಅತ್ತ ಅರವಿಂದ ಹತಾಶಭಾವದಿಂದ ಕುಗ್ಗಿ ಹೋಗಿದ್ದ. ಇತ್ತ ನನ್ನ ಆಚೀಚೆ ಕೂತ ಪುರುಷೋತ್ತಮ ಮತ್ತೆ ಪ್ರಸಾದ, “ಏ ರಮೇಶ, ಏಳೋ, ನಿನ್ನನ್ನೇ ಕರೆದದ್ದು!” ಎಂದು ನನ್ನನ್ನು ದಬ್ಬಿದರು. ಅವರಿಗೆ ನನ್ನ ಮೇಲೆ ನಂಬಿಕೆಯಿತ್ತು. ನನಗಿರಲಿಲ್ಲ! ಹಾಗಾಗಿ ಹಿಂಜರಿದೆ. ಆಗ ಮೇಸ್ಟ್ರು ಮತ್ತೊಮ್ಮೆ “ರಮೇಶ... ಶೆಟ್ಟಿಗಾರ, ... 43.5... ನೀನೇ...” ಎಂದು ಕರೆದರು. ನಾನು ಸಂಕೋಚದ ಮುದ್ದೆಯಾಗಿ ಹೋದೆ. ವಿಷ್ಣುಮಾಸ್ಟ್ರು ಪೇಪರನ್ನು ನನ್ನ ಕೈಗೆ ನೀಡುತ್ತಾ “ಶಹಬ್ಬಾಸ್” ಎಂದು ಬೆನ್ನಿಗೆ ತಟ್ಟಿದರು. ನಾನು ಉಬ್ಬಿ ಹೋದೆ. ಘಟಾನುಘಟಿ ವಿದ್ಯಾರ್ಥಿಗಳ ಸಮೂಹದ ಮುಂದೆ ಬಡಪಾಯಿಯೊಬ್ಬ ಮೊದಲ ಬಾರಿಗೆ ಪೇಪರ್ ಒಂದರಲ್ಲಿ ಕ್ಲಾಸಿಗೇ ಐದನೇ ಸ್ಥಾನವನ್ನು ಪಡೆದ ಸಾಧನೆಗೆ ಇಡೀ ತರಗತಿ ಚಪ್ಪಾಳೆ ತಟ್ಟಿತು, ಒಬ್ಬನನ್ನು ಹೊರತುಪಡಿಸಿ!

ಮುಂದಿನ ಹೆಸರುಗಳಾಗಿ ಅರವಿಂದ... 42.5, ಶ್ರೀಕೃಷ್ಣ... 42 ಕಾಲು, ಪ್ರಸಾದ... 41.5... ಸುಜಾತ 41.5, ವೃಂದಾ 41ಕಾಲು ಹೀಗೆ ಕೇಳುತ್ತಿದ್ದರೆ ನಾನು ಬಾಷ್ಪಾಂಜಲಿಭರಿತನಾಗಿ ನನ್ನ ಉತ್ತರ ಪತ್ರಿಕೆಯನ್ನು ನೋಡುತ್ತಿದ್ದೆ. ಆಗ ರಪ್ಪಕ್ಕನೆ ಅದನ್ನು ಅರವಿಂದ ಕಿತ್ತುಕೊಂಡ. ಮಾತ್ರವಲ್ಲ, “ಅದೇಗೆ ನಿಂಗೆ ನಂಗಿಂತ ಒಂದು ಮಾರ್ಕು ಜಾಸ್ತಿ ಸಿಕ್ತು?” ಎಂದು ಅವನ ಮಾರ್ಕು ಮತ್ತೆ ನನ್ನ ಮಾರ್ಕುಗಳನ್ನು ದುರುಗುಟ್ಟಿ ನೋಡುತ್ತಾ ತುಲನೆ ಮಾಡಲು ಪ್ರಾರಂಭಿಸಿದ. ನಾನು ಏನೂ ಮಾಡುವಂತಿರಲಿಲ್ಲ.

ಅವನಿಗೆ ನನ್ನ ಉತ್ತರಪತ್ರಿಕೆಯಲ್ಲಿ ಏನು ಸಿಕ್ಕಿತೋ, ನಾಕಾಣೆ. ಅವನು ತನ್ನ ನೋಟ್ಸ್ ತೆಗೆದ. ನೋಡಿದ. ದಡಕ್ಕನೆ ಎದ್ದ “ಹ್ಞಾ! ಇದು ಅನ್ಯಾಯ...” ಎಂದು ಗೊಣಗುತ್ತಾ “ಸಾರ್... ಸಾರ್” ಎಂದು ಮಾಸ್ಟ್ರ ಬಳಿ ಧಾವಿಸಿದ. “ಇಲ್ನೋಡಿ ಸಾರ್, ಹನ್ನೆರಡನೇ ಪ್ರಶ್ನೆಗೆ ಇವನು ಬರೆದ ಉತ್ತರದ ಫಾರ್ಮುಲಾದಲ್ಲಿ ಮಿಸ್ಟೇಕ್ ಇದೆ, ಆದ್ರೂ ನೀವು ಒಂದೂವರೆ ಮಾರ್ಕು ಕೊಟ್ರಿ... ಇಲ್ಲಿ ನೋಡಿ ಸಾರ್. ನೀವು ಕೊಟ್ಟ ನೋಟ್ಸ್. ಇವನು ಬೇರೇನೋ ಬರೆದಿದ್ದಾನೆ. ಆದ್ರೂ ಇವನಿಗೆ ಮಾರ್ಕು ಕೊಟ್ರಿ” ಎಂದು ವಾದಿಸಿದ. ಹೌದು. ಹನ್ನೆರಡನೇ ಪ್ರಶ್ನೆಯು ಮೂರು ಮಾರ್ಕಿನದ್ದು. ಅದರಲ್ಲಿ ನಂಗೆ ಒಂದೂವರೆ ಮಾರ್ಕು ಮಾತ್ರ ಬಂದಿತ್ತು. ಇಡೀ ತರಗತಿಯಲ್ಲಿ ಅವನೊಬ್ಬನಿಗೇ ಅದರಲ್ಲಿ ಪೂರ್ತಿ ಮೂರು ಅಂಕಗಳು ಬಂದಿತ್ತು. ಆದ್ರೂ ಅವನಿಗೆ ಮತ್ಸರ. ನನ್ನ ಮಾರ್ಕು ಕಡಿಮೆ ಮಾಡಲು ಹೀಗೆ ತಪ್ಪು ಕಂಡು ಹುಡುಕಿದ್ದಾನೆ, ಜೊತೆಗೆ ತಿದ್ದಿದ ಗುರುಗಳಲ್ಲೂ ತಪ್ಪು ಕಂಡುಹಿಡಿದಿದ್ದಾನೆ! ಮಾಸ್ಟ್ರು ಅವನ ನೋಟ್ಸ್ ನೋಡಿದರು. ಏನೋ ಸಂದೇಹ ಬಂತು. ಸತ್ಯನಾರಾಯಣನ ನೋಟ್ಸ್ ತೆಗೆದು ನೋಡಿದರು. ತಲೆಬಿಸಿಯಲ್ಲಿ ಯೋಚಿಸಿದರು. ಪಠ್ಯಪುಸ್ತಕವನ್ನೂ ನೋಡಿದರು. ಛೇ! ಎಂದು ಉದ್ಗಾರ ತೆಗೆದರು. ಏನೋ ಎಡವಟ್ಟಾಗಿದೆ, ಎಂದು ಎಲ್ಲರೂ ಅಂದುಕೊಂಡೆವು. ಅವರು ನಮ್ಮೆಲ್ಲರ ಉತ್ತರಪತ್ರಿಕೆಯನ್ನು ವಾಪಾಸ್ ಪಡೆದುಕೊಂಡರು.

ಆ ಕ್ಲಾಸ್ ಮುಗಿದ ನಂತ್ರ ಅರವಿಂದ ನನ್ನನ್ನು ನೋಡಿ ಅಪಹಾಸ್ಯ ಮಾಡುತ್ತಾ “ಅದ್ಹೇಗೆ ನೀನು ನಂಗಿಂತ ಒಂದಂಕ ಜಾಸ್ತಿ ತೆಗಿತಿಯಾ? ಈಗ ನೋಡು, ನಿಂಗೆ 42 ಮಾರ್ಕು ಅಷ್ಟೇ ಸಿಕ್ತದೆ! ನಂಗಿಂತ ಮತ್ತೆ ಶ್ರೀಕೃಷ್ಣನಿಗಿಂತಲೂ ಕೆಳಗೆ!” ಎಂದ. ಆದರೆ ಶ್ರೀಕೃಷ್ಣ ಮಾತ್ರ ನನ್ನ ಸಾಧನೆಗೆ ಮೆಚ್ಚುಗೆ ಸೂಚಿಸಿ, ಮಾರ್ಕಿನಲ್ಲೇನಿದೆ? ಎಂದು ಅರವಿಂದನಿಗೆ ಬೈದ. ಅಂದು ಸಂಜೆ ಅರವಿಂದನು ವಿಷ್ಣುಮಾಸ್ಟ್ರ ಹತ್ರ ಸ್ಟಾಫ್ ರೂಮಿನಲ್ಲಿ ಭಯಂಕರ ವಾದ ಮಾಡುವುದನ್ನು ಕಂಡ ನನ್ನ ಗೆಳೆಯರು, ಅವನ ಮಾರ್ಕು ಮತ್ಸರಕ್ಕೆ ಹಿಡಿಶಾಪ ಹಾಕಿದ್ರು. ಎಷ್ಟಾದರೂ ಅವರೆಲ್ಲ ಗುರು ಪರಂಪರೆಯವರು, ಪರಿಚಯದವರು. ಮಾಸ್ಟ್ರು ತಮ್ಮವರನ್ನು ಬಿಟ್ಟುಕೊಡಲ್ಲ, ಎಂದರು. ಹಾಗಾಗಿ ನಾನು ಐದನೇ ಸ್ಥಾನದ ಆಸೆಗೆ ತಿಲಾಂಜಲಿಯಿಟ್ಟೆ.

ಮಾರನೆಯ ದಿನ ವಿಷ್ಣುಭಟ್ ಮಾಸ್ಟ್ರು ಬಂದ್ರು. ಎಂದಿನಂತೆ ಪ್ರಸನ್ನಭಾವದಿಂದಿದ್ದರು. ಅವರ ಕೈಯಲ್ಲಿ ನಮ್ಮೆಲ್ಲರ ಉತ್ತರಪತ್ರಿಕೆಯಿತ್ತು. ಅದನ್ನು ಮರುವಿತರಣೆ ಮಾಡಿದರು. ಈ ಸಲ ಸತ್ಯನಾರಾಯಣನಿಗೆ 50ರಲ್ಲಿ 50, ಸೂರ್ಯನಿಗೆ 48, ಮೂರನೆಯ ಹೆಸರಾಗಿ “ರಮೇಶ... 45”, ಎಂದು ಕರೆದಾಗ ನಾನು ಬೆಕ್ಕಸ ಬೆರಗಾದೆ. ಅರವಿಂದ ಆಘಾತಕ್ಕೊಳಗಾದ. ನಂತ್ರದ ಹೆಸರುಗಳು ಜಲಜಳಿಗೆ 44 ಮುಕ್ಕಾಲು, ಸರಸ್ವತಿ ಮತ್ತೆ ಶ್ರೀಕೃಷ್ಣ 44.5, ಪ್ರಸಾದ, ಸುಜಾತ ಮತ್ತೆ ವೃಂದಾ 43, ಕೊನೆಗೆ ಅರವಿಂದ 42.5. ನಮ್ಮೆಲ್ಲರ ಮಾರ್ಕುಗಳು ಹೆಚ್ಚಳವಾಗಿತ್ತು. ಅರವಿಂದನದ್ದು ಮಾತ್ರ ಹಾಗೆಯೇ ಇತ್ತು. ಅವನ ಕಣ್ಣಿನಲ್ಲಿ ಧಾರಾಕಾರ ನೀರು! ಇದ್ಯಾಕೆ ಹೀಗೆ, ಎಂದು ಅವನು ತಳಮಳಿಸುತ್ತಿದ್ದ. ಆಗ ಮೇಸ್ಟ್ರು ಹೇಳಿದ್ರು, “ಕ್ಷಮಿಸಿ ಮಕ್ಕಳೇ, ಹನ್ನೆರಡನೇ ಪ್ರಶ್ನೆಗೆ ಉತ್ತರವು ಗೊಂದಲಮಯವಾಗಿತ್ತು. ಯಾಕೆಂದ್ರೆ, ನಾನು ಕ್ಲಾಸಿನಲ್ಲಿ ನೋಟ್ಸ್ ಕೊಡುವಾಗ ಚಿಕ್ಕ ತಪ್ಪು ಮಾಡಿದ್ದೆ. ಹಾಗಾಗಿ ಸೂರ್ಯನಾರಾಯಣನಿಂದ ಹಿಡಿದು ಹೆಚ್ಚಿನವರು ತಪ್ಪು ಉತ್ತರ ಬರೆಯುವಂತಾಯಿತು. ಅದಕ್ಕೆ ಆ ಪ್ರಶ್ನೆಗೆ ಎಲ್ಲರಿಗೂ ಮೂರಂಕ ಪೂರ್ಣಾಂಕವನ್ನು ಕೊಟ್ಟಿದ್ದೇನೆ. ಇದನ್ನು ನನ್ನ ಗಮನಕ್ಕೆ ಅರವಿಂದ ತಂದಿದ್ದು ಒಳ್ಳೆಯದಾಯ್ತು. ಅವನಿಂದಾಗಿ ನಿಮಗೆಲ್ಲ ಹೆಚ್ಚಿಗೆ ಮಾರ್ಕು ಬಂತು” ಎಂದು ನಕ್ಕರು. ನಾವೆಲ್ಲ ಕಳಕಳನೆ ನಕ್ಕರೆ ಅರವಿಂದ ಮಾತ್ರ ಪೆಚ್ಚುಮೋರೆ ಹಾಕಿಕೊಂಡಿದ್ದ. ಅವನ ಮತ್ಸರಕ್ಕೆ ತಕ್ಕ ಶಾಸ್ತಿಯಾಯಿತು, ಎಂದು ಎಲ್ಲರೂ ಮಾತಾಡಿಕೊಂಡೆವು. ಈ ಘಟನೆ ನಡೆದಿದ್ದು ನಾನು ಎಂಟನೇ ತರಗತಿಯಲ್ಲಿರುವಾಗ, 1983ರ ಇಸವಿಯಲ್ಲಿ.



ರಮೇಶ್ ಶೆಟ್ಟಿಗಾರ್ ಮಂಜೇಶ್ವರ
ವಿಜಯಾ ಎನ್ಕ್ಲೇವ್
ಬಿಳೇಕಹಳ್ಳಿ, ಬೆಂಗಳೂರು


Photo Credit: Yashaswi J

# ನಮ್ಮವರು


ಸುರತ್ಕಲ್ ತಲುಪಿದ್ದೆ ತಡ, ಕ್ಯಾಮೆರಾ ಹಿಡಿದು 70-600ಎಂಎಂ ಲೆನ್ಸ್ ಹಾಕಿ ಛಾವಣಿಯ ಮೇಲೆ ಹೋಗಿ ಒಂದು ಮೂಲೆಯಲ್ಲಿ ಕುಳಿತೆ. ಮನೆಯ ಮುಂದೆ ಇದ್ದ ದೊಡ್ಡ ಅಂಗಳದಲ್ಲಿ 10-12 ಉದ್ದುದ್ದ ಮರಗಳ ಮಧ್ಯೆ ಒಂದು ಮರದಿಂದ “ಕಾ... ಕಾ...” ಎಂದು ಕಾಗೆಯ ಕೂಗು ಕೇಳಿಸಿತು. ಈ ಕೂಗಿಗೆ ನನ್ನದೇನೂ ಕಮ್ಮಿ ಇಲ್ಲ ಎಂದೂ ಅದೇ ಮರದಲ್ಲಿದ್ದ ಅಕ್ಕಪಕ್ಕದ ಕಾಗೆಗಳು ಒಂದೇ ಸಮನೆ ಕೂಗಿದವು. ಇನ್ನು ಬೇರೆ ಮರಗಳಲ್ಲಿದ್ದ ಕಾಗೆಗಳಂತೂ “ನಾ ಮುಂದು ತಾ ಮುಂದು” ಅಂತ ಕೂಗಿಕೊಂಡು ನನ್ನ ತಲೆಮೇಲಿಂದ ಹಾರಿ ಹೋಗಿ ಮನೆಯ ಹಿಂದಿದ್ದ ತೆಂಗಿನ ಮರದ ಮೇಲೆ ಕುಳಿತು ಅದೇ ರಾಗದಲ್ಲಿ “ಕಾ... ಕಾ...” ಎಂದು ಚೀರ ತೊಡಗಿದವು.

ಇದನ್ನೆಲ್ಲ ಸದ್ದಿಲ್ಲದೆ ಕ್ಯಾಮೆರಾ ಹಿಡಿದು ಕೂತಿದ್ದ ನನಗೆ ಒಮ್ಮೆಲೇ ಆಭಾಸವಾಯಿತು. ಇದೇನಾದರೂ ನನ್ನನ್ನೇ ನೋಡಿ ಹೀಗೆ ಕೂಗಿದವ? ಆದರೂ ಈ ವಿಚಾರವನ್ನು ಬದಿಗಿಟ್ಟು ನನಗೆ ಬೇಕಾದ ಪಕ್ಷಿಯ ಚಿತ್ರವೊಂದನ್ನು ಸೆರೆಹಿಡಿಯಲು ಕಾದು ಕುಳಿತೆನು. ಸುಮಾರು 15 ನಿಮಿಷ ಕಳೆದರೂ ಕಾಗೆಗಳ ಜುಗಲ್ಬಂದಿ ಬಿಟ್ಟು ಬೇರಾವ ಪಕ್ಷಿಗಳು ಹತ್ತಿರದ ಯಾವುದೇ ಮರದಲ್ಲಿರಲಿಲ್ಲ.

ನನಗಂತೂ ಈ ಕಾಗೆಗಳ ಕಛೇರಿ ಮೂಗಿನ ತುದಿಯಲ್ಲಿ ಕೋಪ ತರಿಸಿತ್ತು. ಒಂದೇ ಸಮನೆ 20 ನಿಮಿಷಗಳ ಕಛೇರಿ ಕೇಳಲಾಗದೆ, ಸೀದಾ ಕೆಳಗಿಳಿದು ಮನೆಯ ಒಳಗೆ ಹೆಜ್ಜೆ ಇಟ್ಟಾಗ ನೀರಸ ಮೌನ. “ಅರೆ! ಇದೇನಿದು ಇಷ್ಟೊತ್ತು ‘ನಾನು ನಾನೆ, ನೀನು ನೀನೆ’ ಎನ್ನುವ ಕರ್ಕಶ ಸಂಗೀತ ಕಛೇರಿಯು, ನಾನು ಎದ್ದು ಬಂದದಕ್ಕೆ ನಿಂತು ಹೋಯಿತೇ?”

“ಮತ್ತೆ ಹೋಗಿ ನೋಡುವ. ನನ್ನಿಂದ ಭಗ್ನವಾದದ್ದು ನಿಜನೇನಾ? ನೋಡಿ ಬಿಡುವ” ಎಂದು ಛಾವಣಿಯ ಮೆಟ್ಟಿಲೇರುತ್ತಿದ್ದಾಗ ಶುರುವಾಯಿತು ಅದೇ ರಾಗ, ಅದೇ ಹಾಡು, ಅದೇ ಹಾರಾಟ. “ನಿಮ್ಮ ಕಛೇರಿ ನಿಂತರೇನೇ ಒಳ್ಳೆಯದು” ಎಂದು ಮನಸ್ಸಿನಲ್ಲೆ ಗುಣುಗುತ್ತಾ ಮತ್ತೆ ಮನೆಗೆ ಮರಳಿದೆನು. ಮನೆಯಲ್ಲಿ ಚಾ ಕುಡಿಯುತ್ತಾ ಆಲೋಚಿಸಿದೆ. “ಅದೇನದು ನಾನು ಹೋದರೆ ಮಾತ್ರ ಈ ಕಾಗೆಗಳು ಕಿರುಚುವುದು. ನನ್ನನು ಅಲ್ಲಿಂದ ಓಡಿಸಲೇ ಈ ಕಾಗೆಗಳು ಹಾಗೆ ಮಾಡಿದವ? ನಾನೇನಾದರೂ ಅಪಾಯ ತಂದೊಡ್ಡುವ ಹಾಗೆ ಮಾಡುವೆನೆಂದು ಅವುಗಳಿಗೆ ಭಯವಾಯಿತೇ? ಏನಿರಬಹುದು?” ಎಂದು ಗಾಢವಾಗಿ ಯೋಚಿಸಿದಾಗ ಹೊಳೆದದ್ದು ಆ ಮರದಲ್ಲಿ ಕಾಗೆಯ ಗೂಡಿನಲ್ಲಿ ಅದರ ಮರಿಗಳಿರಬಹುದೆಂದು. ಆ ಮರಿಗಳಿಗೆ ನನ್ನಿಂದೇನಾದರು ಅಪಾಯ ಇರಬಹುದೇ ಎಂಬ ಆತಂಕದಿಂದ ಕಾಗೆಗಳು ನನ್ನನ್ನು ಅಟ್ಟಿಸಿದವೆಂದು. ಇದನ್ನು ಪರಿಶೀಲಿಸಿ ಬಿಡುವೆನೆಂದು ಮನೆಯ ಕಿಟಕಿಯಿಂದ ಆ ಮರದ ಕೊಂಬೆಗಳ ಮೇಲೆ ಕ್ಯಾಮೆರಾದಿಂದ ಸ್ಕ್ಯಾನ್ ಮಾಡಿದೆ. ನಿಜ! ಅಲ್ಲಿ ಒಂದೆರಡು ಗೂಡಂತೂ ಇತ್ತು. ಮರಿಗಳು ಸಹ ಅದರಲ್ಲಿರಬಹುದು ಎಂದು ಅನಿಸಿ ಸುಮ್ಮನಾದೆ.

ಕೆಲ ಸಮಯ ಕಳೆದ ನಂತರ ಮತ್ತೆ ಛಾವಣಿಯ ಮೇಲೆ ಹೋದೆ. ಮತ್ತೆ ಈ ಕಾಗೆಗಳ ಕಿರುಚಾಟ ಶುರು. ಭೂಕಂಪವಾದ ಹಾಗೆ ಅನುಭವ. “ಎಲಾ ಕುನ್ನಿ! ಹ್ಮ್ಮ!” ಎಂದು ಕೋಪದಿಂದ ಇಳಿದು ಬಂದೆ. “ಈ ಮರಿಗಳ ರಕ್ಷಣೆಗೆ ಅದರ ಅಪ್ಪ ಅಮ್ಮ ಕಿರುಚಿದರೆ ಒಪ್ಪಬಹುದು. ಆದರೆ ಈ ಊರಲ್ಲಿರುವ ಎಲ್ಲಾ ಕಾಗೆಗಳು ಇದರ ರಕ್ಷಣೆಗೇಕೆ ಬರಬೇಕು. ಅದರ ಅದರ ಮನೆಗಳಿಲ್ಲವೇ? ಅವುಗಳ ಮರಿಗಳಿಲ್ಲವೇ? ಸುಮ್ಮನೆ ಬೇರೆ ಕಾಗೆಗಳ ಪರ್ಸನಲ್ ಮ್ಯಾಟರ್ ಅಲ್ಲಿ ಉಳಿದ ಕಾಗೆಗಳೇಕೆ ತಲೆಕೊಡಬೇಕು? ಏನಾದರೂ ತಪ್ಪಾದರೆ ಅದನ್ನು ಸರಿಮಾಡಲು ದೇವರಿದ್ದಾನಲ್ಲ. ಬೇರೆ ಯವರ ಮನೆಯ ಬಗ್ಗೆ ಇತರರಿಗೇನು ಉಸಾಬರಿ” ಮನಸಲ್ಲೇ ಬಯ್ಯುತ್ತ ಮನೆಯಲ್ಲೇ ಕುಳಿತೆ.



ಯಶಸ್ವಿ ಜೆ.
ಜ್ಞಾನಭಾರತಿ,
ಬೆಂಗಳೂರು

# ಸತ್ಯ -ತೆರೆ..!

ಸತ್ಯವನ್ನು ಎಲ್ಲಿಯೂ
ಬಚ್ಚಿಡಲು ಸಾಧ್ಯವಿಲ್ಲ..!

ಸತ್ಯ ಎಲ್ಲಾರ ಸೊತ್ತು
ಸತ್ಯ ಮುಚ್ಚಿಟ್ಟರೆ ಆಪತ್ತು..!

ಸತ್ಯ ಬೆಂಕಿಯ ಜ್ವಾಲೆ
ಸತ್ಯ ಬಿಚ್ಚಿಟ್ಟರೆನೇ ಕುತ್ತು..!

ಸತ್ಯ ಅನ್ವೇಷಕನ ಬೆಲೆ
ಸತ್ಯ ಸತ್ತನಂತರ ತೆರೆ..!



ಯಾದವ ಎಸ್ ಕಲ್ಲಾಪು,
ಬೆಂಗಳೂರು.

# ಶೆಟ್ಟಿಗಾರ ವಾಣಿ

## ಸಮಾಜ ಬಾಂಧವರ ಅವಗಾಹನೆಗಾಗಿ

- ಸಮಾಜದಲ್ಲಿರುವ ಸಾಹಿತ್ಯ ರಂಗದ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ಉದ್ದೇಶ ಹೊಂದಿರುವ **ಶೆಟ್ಟಿಗಾರ ವಾಣಿ** ತನ್ನ ಪ್ರಕಟಣೆಯನ್ನು ಪ್ರಾರಂಭಿಸಿ ಪ್ರಗತಿ ಪಥದಲ್ಲಿದ್ದು ಸಮಾಜ ಬಾಂಧವರ ಮೆಚ್ಚುಗೆಗೆ ಪಾತ್ರವಾಗಿದೆ.
- ಸಮಾಜ ಬಾಂಧವರು ಬರೆದಿರುವ ಕಥೆ, ಕವನ, ಪ್ರಬಂಧ, ಪ್ರವಾಸ ಕಥನಗಳು, ವೈಚಾರಿಕ ಲೇಖನಗಳು, ವ್ಯಕ್ತಿ ಮತ್ತು ಜೀವನ ಅನುಭವ ಗಾಥೆಗಳು, ನಗೆ ಬರಹಗಳು, ವ್ಯಂಗ್ಯ ಮತ್ತು ರೇಖಾಚಿತ್ರಗಳು ಮೊದಲಾದ ವಿಭಿನ್ನ ಸಾಹಿತ್ಯ ಕೃತಿಗಳನ್ನು ಸ್ವೀಕರಿಸಲಾಗುವುದು.
- ಆಯ್ಕೆಯಾದ ಬರಹಗಳನ್ನು ಪತ್ರಿಕೆಯ ಮುಂದಿನ ಸಂಚಿಕೆಗಳಲ್ಲಿ ಪ್ರಕಟಿಸಲಾಗುವುದು.
- ಬರಹಗಳ ಆಯ್ಕೆ ಮತ್ತು ಪ್ರಕಟಣೆಯ ವಿಷಯದಲ್ಲಿ ಪತ್ರಿಕೆಯ ತೀರ್ಮಾನವೇ ಅಂತಿಮವಾಗಿರುತ್ತದೆ.
- ಲೇಖಕರು ತಮ್ಮ ಹೆಸರು, ವಿಳಾಸ, ಭಾವಚಿತ್ರ ಮತ್ತು ಕಿರು ಪರಿಚಯವನ್ನು ಲೇಖನದೊಂದಿಗೆ ನಮೂದಿಸಬೇಕು.
- ಪತ್ರಿಕೆಯ ಸರ್ವಾಂಗೀಣ ಪ್ರಗತಿಗೆ ಸಲಹೆ ಸೂಚನೆಗಳನ್ನು ಸಾದರದಿಂದ ಸ್ವೀಕರಿಸಲಾಗುವುದು.

ಆಸಕ್ತರು ತಮ್ಮ ಬರಹಗಳನ್ನು (WORD FILES) ಇಮೇಲ್ ಮೂಲಕ ಕೆಳಕಂಡ ಇಮೇಲ್ ವಿಳಾಸಕ್ಕೆ ಕಳುಹಿಸಿಕೊಡಬೇಕಾಗಿ ವಿನಂತಿಸಲಾಗಿದೆ (ಹೆಚ್ಚಿನ ಮಾಹಿತಿ, ವಿವರ ಮತ್ತು ನಿಮ್ಮ ಅನಿಸಿಕೆಗಳಿಗೆ ಸಂಪರ್ಕಿಸಿ):

**shettigaravani@gmail.com**
**ವಾಟ್ಸಪ್ ನಂ. 9845660131**

ಪತ್ರಿಕೆಯ ಓದುಗರು ತಮ್ಮ ಅನಿಸಿಕೆ ಮತ್ತು ಸಲಹೆಗಳನ್ನು ಕೆಳಕಂಡ ಇಮೇಲ್ ವಿಳಾಸಕ್ಕೆ ಕಳುಹಿಸಬೇಕಾಗಿ ಕೋರಿಕೆ:

**shettigaravani@gmail.com**
**Mob. No. 9845660131**

# ದಕ್ಷಿಣ ಕನ್ನಡ ಪದ್ಮಶಾಲಿ ಸಮಾಜ ಸೇವಾ ಕೂಟ (ರಿ)

ಆಡಳಿತ ಕಛೇರಿ: ನಂ. 8, ಶಾಂತವೇರಿ ಗೋಪಾಲಗೌಡ ನಗರ 4ನೇ ಅಡ್ಡರಸ್ತೆ, ಮೂಡಲಪಾಳ್ಯ, ಬೆಂಗಳೂರು 560072.
dkpadmashalibng@gmail.com • www.dkpadmashalibng.in • +91 95354 43311

ದಕ್ಷಿಣ ಕನ್ನಡ ಪದ್ಮಶಾಲಿ ಸಮಾಜ ಸೇವಾ ಕೂಟದ **34ನೇ** ವಾರ್ಷಿಕ ಮಹಾಸಭೆಯು **ದಿನಾಂಕ 27-10-2024 ಭಾನುವಾರ ಬೆಳಿಗ್ಗೆ 9 ಘಂಟೆಗೆ** ಸರಿಯಾಗಿ **ಕೆ.ಇ.ಬಿ. ಎಂಜಿನಿಯರಿಂಗ್ ಅಸೋಸಿಯೇಶನ್,** ರೇಸ್ ಕೋರ್ಸ್ ರಸ್ತೆ, ಆನಂದ ರಾವ್ ಸರ್ಕಲ್, ಬೆಂಗಳೂರು ಇಲ್ಲಿ ನೆರವೇರಲಿದೆ.

ಅಧ್ಯಕ್ಷತೆ

**ಶ್ರೀಮತಿ ಭಾನುಮತಿ ಡಿ. ಶೆಟ್ಟಿಗಾರ್**
ಕೂಟದ ಅಧ್ಯಕ್ಷರು

ಮುಖ್ಯ ಅತಿಥಿಗಳು

**ಶ್ರೀ ರೋಷನ್ ಶೆಟ್ಟಿಗಾರ್,** ಬಿ.ಇ
ಜನರಲ್ ಮ್ಯಾನೇಜರ್, ಟೊಯೋಟ ಕಿರ್ಲೋಸ್ಕರ್ ಮೋಟಾರ್ಸ್

**ಶ್ರೀ ರಾಮದಾಸ್ ಶೆಟ್ಟಿಗಾರ್**
ಅಧ್ಯಕ್ಷರು
ದ. ಕ. ಜಿಲ್ಲಾ ಪದ್ಮಶಾಲಿ ಮಹಾಸಭಾ
ಮಂಗಳೂರು

**ಶ್ರೀ ಉತ್ತಮ್ ಶೆಟ್ಟಿಗಾರ್**
ಅಧ್ಯಕ್ಷರು
ಪದ್ಮಶಾಲಿ ಸಮಾಜ ಸೇವಾ ಸಂಘ
ಮುಂಬಯಿ

**ಶ್ರೀ ರಘುರಾಮ್ ಶೆಟ್ಟಿಗಾರ್**
ಅಧ್ಯಕ್ಷರು
ಪದ್ಮಶಾಲಿ ಸಮುದಾಯ,
ದುಬೈ, ಯು.ಎ.ಇ

**ಗೌರವಾರ್ಪಣೆ**

**ಡಾ| ರೇವತೀ, ಎಮ್.ಎ. ಪಿ.ಎಚ್.ಡಿ**
Circle Police Inspector, ಕಿಕ್ಕೇರಿ, ಮಂಡ್ಯ

**D K Padmashali Samaja Seva Koota (R), Bengaluru,**
**Bank of Baroda, Bangalore Main Branch, Bengaluru**
**A/c No.73840100005233**
**IFSC Code: BARB0BANGAL**

5th character must be read as ZERO

ಯು.ಪಿ.ಐ (UPI) ಮುಖಾಂತರ ಸಂದಾಯ ಮಾಡುವವರು +91 95354 43311 ಗೆ ಸ್ಕ್ರೀನ್-ಶಾಟ್ (screenshot) ಕಳುಹಿಸಬೇಕಾಗಿ ವಿನಂತಿ.